ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜುಲೈ ೧೯, ೨೦೧೨ (ಆಷಾಢ ೨೮, ಶಕ ವರ್ಷ ೧೯೩೪)	ಸಂಚಿಕೆ ೨೯

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 91/1992-93 ದಿನಾಂಕ:13/07/1992.

ಸಂಖ್ಯೆ:ಎ1.ಅಅಪ್ರ.71A.91/1992-93, ದಿನಾಂಕ:20/12/2011

ಉಪಸ್ಥಿತರು : ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.

ಪಿರ್ಯಾದಿ : ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.

ಅರ್ಜಿದಾರರು
ಆರೋಪಿಗಳು : 1-ಪ್ಯಾರೇಜಾನ್ ಬಿನ್ ಅಬ್ದುಲ್ ಸತ್ತಾರ್,
ರಸೀಲ್ದಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು.

2-ಸಲೀಂ ಬಿನ್ ರತ್ನಂ, ರಸಲ್ದಾರ್ ಸ್ಟ್ರೀಟ್,
ಶೇಷಾದ್ರಿಪುರಂ, ಬೆಂಗಳೂರು.

3-ಅಬ್ದುಲ್ ಜಬ್ಬಾರ್ ಬಿನ್ ಸೈಯದ್ ಸಂಶೀರ್.

(1 ರಿಂದ 3ರ ವರೆಗಿನ ಆರೋಪಿಗಳನ್ನು ಬಂಧಿಸಿದೆ)

ಪ್ರಕರಣದ ಮುಖ್ಯಾಂಶಗಳು:

1. ಬೆಂಗಳೂರು ನಗರದ ಶೇಷಾದ್ರಿಪುರಂನ ರಸಲ್ದಾರ್ ರಸ್ತೆಯ ಮನೆ ನಂ.11ರಲ್ಲಿ ಶ್ರೀಗಂಧ ದಾಸ್ತಾನಿರುವ ಬಗ್ಗೆ ಖಚಿತ ಮಾಹಿತಿಯ ಮೇರೆಗೆ ದಿನಾಂಕ:13-07-1992ರಂದು ಅಪರಾಹ್ನ 2.00 ಗಂಟೆಯ ಸಮಯದಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಸದರಿ ಸ್ಥಳಕ್ಕೆ ಭೇಟಿ ಪರಿಶೀಲಿಸಲಾಗಿ, ಅಬ್ದುಲ್ ಸತ್ತಾರ್ ಎಂಬುವವರ ಮಗನಾದ ಪ್ಯಾರೇಜಾನ್ ಎಂಬುವವರ ಮನೆಯ ಬಾಗಿಲು ಬಳಿ ಬಲಭಾಗಕ್ಕೆ ಮೇಜಿನ ಕೆಳಗೆ ಒಂದು ಸ್ಯೂಟ್‌ಕೇಸ್ ಇರುವುದು ಕಂಡುಬಂದಿರುತ್ತದೆ. ಸದರಿ ಸ್ಯೂಟ್‌ಕೇಸನ್ನು ತೆಗೆಯಿಸಿ ನೋಡಲಾಗಿ, ವಿವಿಧ ಅಳತೆಯ ಒಟ್ಟು 23 ಶ್ರೀಗಂಧದ ಮರದ ತುಂಡು ಮತ್ತು ಚಕ್ಕೆಗಳಿದ್ದು, ಇದರ ಒಟ್ಟು ತೂಕ 9.2 ಕೆ.ಜಿ ಇರುತ್ತದೆ. ಈ ಬಗ್ಗೆ ಮನೆಯ ಮಾಲೀಕನಾದ ಪ್ಯಾರೇಜಾನ್ ಇವರನ್ನು ವಿಚಾರಿಸಲಾಗಿ, ಶ್ರೀಗಂಧವನ್ನು ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಗ್ರಾಮವಾಸಿಯಾದ ಭಾಷ ಎಂಬುವವರು ತಂದು ಹಣಕ್ಕೆ ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಶ್ರೀಗಂಧವನ್ನು ಮನೆಯಲ್ಲಿ ಇಟ್ಟುಕೊಳ್ಳಲು ಇಲಾಖಾ ರಹದಾರಿಯನ್ನು ಕೇಳಲಾಗಿ, ಆತನ ಬಳಿ ಯಾವುದೇ ರಹದಾರಿ ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969 ಉಲ್ಲಘಿಸಿರುವ ಕಾರಣ, ಆರೋಪಿ ಪ್ಯಾರೇಜಾನ್ ಹಾಗೂ ಆತನ ಸಹಚರರಾದ ಸಲೀಂ ಮತ್ತು ಅಬ್ದುಲ್ ಜಬ್ಬಾರ್ ಇವರುಗಳನ್ನು ಬಂಧಿಸಿ 9.2 ಕೆ.ಜಿ ಶ್ರೀಗಂಧವನ್ನು ಪಂಚನಾಮೆಯ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ.

2. ಹೆಚ್ಚಿನ ತನಿಖೆಗಾಗಿ ಒಟ್ಟು 9.2 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು. ಅರಣ್ಯ ಸಂಚಾರಿ ದಳ. ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

3. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 9.212 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು. ಅರಣ್ಯ ಸಂಚಾರಿ ದಳ. ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ. ಅರಣ್ಯ ಸಂಚಾರಿ ದಳ. ಬೆಂಗಳೂರು ರವರನ್ನು ಕೋರಿರುತ್ತಾರೆ.

4. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ವಿ.ಶ್ರೀನಿವಾಸಪ್ಪ ಬಿನ್ ಲೇಟ್.ಶ್ರೀ.ವರದಪ್ಪ. ವಲಯ ಅರಣ್ಯಾಧಿಕಾರಿ ಹಾಗೂ ಶ್ರೀ.ರಂಗಸಾಮಯ್ಯ ಬಿನ್ ಶ್ರೀ.ವೆಂಕಟಪ್ಪ, ವನಪಾಲಕ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ. ಅರಣ್ಯ ಸಂಚಾರಿ ದಳ. ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿದ ಹೇಳಿಕೆಗಳನ್ನು ಪರಿಶೀಲಿಸಲಾಗಿ. ದಿನಾಂಕ:13-07-1992ರಂದು ಬೆಂಗಳೂರು ನಗರದ ಶೇಷಾದ್ರಿಪುರಂನ ರಸಲ್ದಾರ್ ರಸ್ತೆಯ ಮನೆ ನಂ.11ರಲ್ಲಿ ಅಕ್ರಮವಾಗಿ 9.2 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಲ್ಲಂಘನೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

6. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ. ಅವರ ವಿಳಾಸ ಪತ್ತೆಯಾಗದ ಕಾರಣ. ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

7(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 9.2 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದೆಯೇ?

7(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 9.2 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

7(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

7(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

8. ದಿನಾಂಕ:13-07-1992ರಂದು ಬೆಂಗಳೂರು ನಗರದ ಶೇಷಾದ್ರಿಪುರಂನ ರಸಲ್ದಾರ್ ರಸ್ತೆಯ ಮನೆ ನಂ.11ರಲ್ಲಿ ಅಕ್ರಮವಾಗಿ 9.2 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಬಂಧಿಸಲಾದ ಆರೋಪಿಗಳ ಹೇಳಿಕೆಯಲ್ಲಿಯೂ ಸಹ ಶ್ರೀಗಂಧವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿರುವ ಬಗ್ಗೆ ಒಪ್ಪಿಕೊಂಡಿರುವ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 9.2 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

9. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 9.2 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:91/1992–93ರಲ್ಲಿ ಅಮಾನತ್ತು–ಪಡಿಸಿಕೊಂಡಿರುವ ಒಟ್ಟು 9.2 ಕೆ.ಜಿ ಶ್ರೀಗಂಧದ ಮರದ ತುಂಡು ಹಾಗೂ ಚಕ್ಕೆಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:20–12–2011ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 270/1993–94 ದಿನಾಂಕ:01/11/1993.

ಸಂಖ್ಯೆ:ಎ1.ಅಅಪ್ರ.71A.270/1993–94, ದಿನಾಂಕ:27/03/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಫಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಪ್ಯಾರೇಜಾನ್ ಬಿನ್ ಲೇಟ್.ಅಬ್ದುಲ್ ಸತ್ತಾರ್, ರಸಲ್ದಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು (ತಲೆಮರೆಸಿಕೊಂಡಿರುತ್ತಾರೆ).

ಪ್ರಕರಣದ ಮುಖ್ಯಾಂಶಗಳು:

1. ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ ಉಲ್ಲಂಘಿಸಿರುವ ಬಗ್ಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ದಿನಾಂಕ:01–11–1993ರಂದು ಮಧ್ಯಾಹ್ನ 12.45ರ ಸಮಯದಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರು ನಗರ, ಶೇಷಾದ್ರಿಪುರಂನ ರಸಲ್ದಾರ್ ಸ್ಟ್ರೀಟ್ ರಸ್ತೆಯಲ್ಲಿರುವ ನಂ.105ರ ಮನೆ ಮೇಲೆ ದಾಳಿ ಮಾಡಲಾಗಿ, ಸದರಿ ಮನೆಯಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮರದ ತುಂಡುಗಳನ್ನು ಶೇಖರಿಸಿಟ್ಟಿರುವುದು ಕಂಡುಬಂದಿರುತ್ತದೆ. ಅನುಮಾನಸ್ಪದವಾಗಿ ಇಡಲಾಗಿದ್ದ ಪ್ಲಾಸ್ಟಿಕ್ ಚೀಲವನ್ನು ತೆಗೆಯಿಸಿ ನೋಡಲಾಗಿ, ಅದರಲ್ಲಿ ಶ್ರೀಗಂಧದ ಬೇರು ಮತ್ತು ಕಾಂಡಗಳಿದ್ದು, ಮನೆಯ ಮಾಲೀಕರಾದ ಪ್ಯಾರೇಜಾನ್ ಬಿನ್ ಲೇಟ್.ಅಬ್ದುಲ್ ಸತ್ತಾರ್ ಎಂಬುವವರು ಪರಾರಿಯಾಗಿರುತ್ತಾರೆ. ನಂತರ ಶ್ರೀಗಂಧವನ್ನು ಒಟ್ಟು ತೂಕ ಮಾಡಲಾಗಿ, ಒಟ್ಟು 15.5 ಕೆ.ಜಿ ಇರುತ್ತದೆ. ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಅಕ್ಕಪಕ್ಕದವರನ್ನು ವಿಚಾರಿಸಲಾಗಿ, ಯಾವುದೇ ಮಾಹಿತಿ ಲಭ್ಯವಾಗದೇ ಇದ್ದ ಕಾರಣ, ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ಉಲ್ಲಂಘನೆ ಮೇರೆಗೆ ಮನೆಯಲ್ಲಿದ್ದ 15.5 ಕೆ.ಜಿ ಶ್ರೀಗಂಧದ ಬೇರು ಮತ್ತು ಕಾಂಡಗಳನ್ನು ಪಂಚನಾಮೆ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಒಟ್ಟು 15.5 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ಪರವಾನಿಗೆ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 15.5 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಡಿ.ಸಿ.ನಾರಾಯಣಮೂರ್ತಿ ಬಿನ್ ಎನ್.ಚನ್ನಕೇಶವಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ) ಇವರ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳನ್ನು ಪರಿಶೀಲಿಸಲಾಗಿ, ದಿನಾಂಕ:01-11-1993 ರಂದು ಬೆಂಗಳೂರು ನಗರ, ಶೇಷಾದ್ರಿಪುರಂನ ರಸಲ್ದಾರ್ ಸ್ಟ್ರೀಟ್ ರಸ್ತೆಯಲ್ಲಿರುವ ನಂ.105ರ ಮನೆ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಸದರಿ ಮನೆಯಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ 15.5 ಕೆ.ಜಿ ಶ್ರೀಗಂಧದ ಬೇರು ಮತ್ತು ಕಾಂಡಗಳನ್ನು ಶೇಖರಿಸಿಟ್ಟಿರುವುದು. ಮನೆಯ ಮಾಲೀಕರಾದ ಪ್ಯಾರೇಜಾನ್ ಬಿನ್ ಲೇಟ್.ಅಬ್ದುಲ್ ಸತ್ತಾರ್ ಎಂಬುವವರು ಪರಾರಿಯಾದ ಕಾರಣ ಸ್ಥಳೀಯರ ಸಮಕ್ಷಮ ಪಂಚನಾಮೆಯ ಸಹಿತ ಶ್ರೀಗಂಧವನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಸಾಕ್ಷ್ಯಾ ನೀಡಿರುತ್ತಾರೆ. ಅಲ್ಲದೇ ಸರ್ಕಾರಿ ಸಾಕ್ಷಿಗಳು ಪಂಚನಾಮೆಯಲ್ಲಿರುವ ಸಹಿಯನ್ನು ಗುರುತಿಸಿರುತ್ತಾರೆ. ಪ್ರಕರಣದಲ್ಲಿ 15.5 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15.5 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15.5 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:01-11-1993 ರಂದು ಬೆಂಗಳೂರು ನಗರ, ಶೇಷಾದ್ರಿಪುರಂನ ರಸಲ್ದಾರ್ ಸ್ಟ್ರೀಟ್ ರಸ್ತೆಯಲ್ಲಿರುವ ನಂ.105ರ ಮನೆಯಲ್ಲಿ ಸೂಕ್ತ ಪರವಾನಿಗೆ ಇಲ್ಲದೇ 15.5 ಕೆ.ಜಿ ಶ್ರೀಗಂಧದ ಬೇರು ಹಾಗೂ ಕಾಂಡಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯು ತಲೆಮರೆಸಿಕೊಂಡಿರುವ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 15.5 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 15.5 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:270/1993-94ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 15.5 ಕೆ.ಜಿ ಶ್ರೀಗಂಧದ ಬೇರು ಮತ್ತು ಕಾಂಡಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 56/1997-98 ದಿನಾಂಕ:12/07/1997.

ಸಂಖ್ಯೆ:ಎ1.ಅಅಪ್ರ.71A.56/1997-98, ದಿನಾಂಕ:27/03/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾಧಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:12-07-1997ರಂದು ಬೆಳಿಗ್ಗೆ 10.00 ಗಂಟೆಯ ಸಮಯದಲ್ಲಿ ಖಚಿತ ಮಾಹಿತಿಯ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿ, ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಅಬಕಾರಿ ಇಲಾಖೆ ಸಿಬ್ಬಂದಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಟ್ಟಿಗೇನಹಳ್ಳಿ ಗ್ರಾಮದ ಅಂಗಡಿ ಬಾಷಾ ಸಾಬ್ ಇವರ ಮಗನಾದ ಸಾಕಿಕ್ ಖಾನ್ ಇವರ ಮನೆಯ ಮೇಲೆ ದಾಳಿ ಮಾಡಲಾಗಿ, ಸದರಿ ಮನೆಯಲ್ಲಿ ಶ್ರೀಗಂಧದ ಮರದ ತುಂಡು ಹಾಗೂ ಬೇರುಗಳು ಇರುವುದು ಕಂಡುಬಂದಿರುತ್ತದೆ. ಇದನ್ನು ತೂಕ ಮಾಡಲಾಗಿ, ಒಟ್ಟು 165 ಇರುತ್ತದೆ. ಮನೆ ಮೇಲೆ ದಾಳಿ ಮಾಡಿದ ವೇಳೆಯಲ್ಲಿ ಸದರಿ ಮನೆಯಲ್ಲಿ ಯಾರೂ ಸಹ ವಾಸಿಸದೇ ಇದ್ದ ಕಾರಣ, ಮನೆ ಮಾಲೀಕರ ವಿಳಾಸವನ್ನು ಅಕ್ಕಪಕ್ಕದವರ ಬಳಿ ಕೇಳಲಾಗಿ, ಅಂಗಡಿ ಬಾಷಾ ಸಾಬ್ ಇವರ ಮಗನಾದ ಸಾಕಿಕ್ ಖಾನ್, ಕಟ್ಟಿಗೇನಹಳ್ಳಿ ಎಂಬುದಾಗಿ ತಿಳಿದುಬಂದಿರುತ್ತದೆ. ಶ್ರೀಗಂಧವು ಸರ್ಕಾರಿ ಸ್ವತ್ತಾಗಿದ್ದು, ಅದನ್ನು ಅಕ್ರಮವಾಗಿ ಮನೆಯಲ್ಲಿ ಸಂಗ್ರಹಿಸಿದ್ದ ಆಸಾಮಿಯು ಇಲಾಖಾ ಸಿಬ್ಬಂದಿಗಳನ್ನು ಕಂಡು ತಲೆಮರೆಸಿಕೊಂಡಿರುತ್ತಾರೆ. ಸೂಕ್ತ ಪರವಾನಿಗೆ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969 ಉಲ್ಲಂಘನೆಯಾಗಿರುವುದರಿಂದ ಸದರಿ ಮನೆಯಲ್ಲಿದ್ದ ಒಟ್ಟು 165 ಕೆ.ಜಿ ಶ್ರೀಗಂಧದ ಮರದ ತುಂಡು ಹಾಗೂ ಬೇರುಗಳನ್ನು ಪಂಚನಾಮೆಯ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಒಟ್ಟು 165 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ಪರವಾನಿಗೆ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 165 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎಂ.ಮಹದೇವಯ್ಯ ಬಿನ್ ಲೇಟ್.ಟಿ.ಎಂ.ಮಲ್ಲಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಕೆ.ವಿ.ಶ್ರೀನಿವಾಸಪ್ಪ ಬಿನ್ ಲೇಟ್.ವರದಪ್ಪ, ವಲಯ ಅರಣ್ಯಾಧಿಕಾರಿ, ಶ್ರೀ.ವೆಂಕಟರಾಜು ಬಿನ್ ಲೇಟ್.ಗೋರಪ್ಪ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ) ಹಾಗೂ ಶ್ರೀ.ಹೆಚ್.ವೀರಪ್ಪ ಬಿನ್ ಹುಚ್ಚಹನುಮಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳನ್ನು ಪರಿಶೀಲಿಸಲಾಗಿ, ದಿನಾಂಕ:12-07-1997 ರಂದು ಅರಣ್ಯ ಸಂಚಾರಿ ದಳದ ಸಿಬ್ಬಂದಿ, ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಅಬಕಾರಿ ಇಲಾಖೆ ಸಿಬ್ಬಂದಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು,

ಕಟ್ಟಿಗೇನಹಳ್ಳಿ ಗ್ರಾಮದ ಅಂಗಡಿ ಬಾಷಾ ಸಾಬ್ ಇವರ ಮಗನಾದ ನಾಸಿಕ್ ಖಾನ್ ಇವರ ಮನೆಯ ಮೇಲೆ ದಾಳಿ ಮಾಡಿದಾಗ ಸದರಿ ಮನೆಯಲ್ಲಿ ಅಕ್ರಮವಾಗಿ ಶ್ರೀಗಂಧದ ಮರದ ತುಂಡು ಹಾಗೂ ಬೇರುಗಳನ್ನು ದಾಸ್ತಾನು ಮಾಡಿರುವುದು. ಶ್ರೀಗಂಧವು ಸರ್ಕಾರಿ ಸ್ವತ್ತಾಗಿದ್ದು, ಇಲಾಖೆಯವರನ್ನು ಕಂಡು ಆರೋಪಿ ತಲೆಮರೆಸಿಕೊಂಡಿರುವುದು ಹಾಗೂ ನ್ಯಾಯಾಲಯದಿಂದ ತಪಾಸಣೆಗೆ ಅನುಮತಿ ಪಡೆಯಲು ಕಾಲಾವಕಾಶ ಇಲ್ಲದೇ ಇದ್ದುದರಿಂದ ಸ್ಥಳೀಯರ ಸಮಕ್ಷಮ ಪಂಚನಾಮೆಯ ಸಹಿತ ಶ್ರೀಗಂಧವನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಸಾಕ್ಷ್ಯ ನೀಡಿರುತ್ತಾರೆ. ಅಲ್ಲದೇ ಸರ್ಕಾರಿ ಸಾಕ್ಷಿಗಳು ಪಂಚನಾಮೆಯಲ್ಲಿರುವ ಸಹಿಯನ್ನು ಗುರುತಿಸಿರುತ್ತಾರೆ. ಪ್ರಕರಣದಲ್ಲಿ 165 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

7(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 165 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದೆಯೇ?

7(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 165 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

7(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

7(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

8. ದಿನಾಂಕ:12-07-1997ರಂದು ಅರಣ್ಯ ಸಂಚಾರಿ ದಳದ ಸಿಬ್ಬಂದಿ, ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಅಬಕಾರಿ ಇಲಾಖೆ ಸಿಬ್ಬಂದಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಟ್ಟಿಗೇನಹಳ್ಳಿ ಗ್ರಾಮದ ಅಂಗಡಿ ಬಾಷಾ ಸಾಬ್ ಇವರ ಮಗನಾದ ನಾಸಿಕ್ ಖಾನ್ ಇವರ ಮನೆಯ ಮೇಲೆ ದಾಳಿ ಮಾಡಿದಾಗ ಸದರಿ ಮನೆಯಲ್ಲಿ ಸೂಕ್ತ ಪರವಾನಿಗೆ ಇಲ್ಲದೇ ಶ್ರೀಗಂಧದ ಮರದ ತುಂಡು ಹಾಗೂ ಬೇರುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯು ತಲೆಮರೆಸಿಕೊಂಡಿರುವ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 165 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

9. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 165 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಜಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:56/1997-98ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 165 ಕೆ.ಜಿ ಶ್ರೀಗಂಧದ ಮರದ ತುಂಡುಗಳು ಹಾಗೂ ಬೇರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 200/1997-98 ದಿನಾಂಕ:08/02/1998.

ಸಂಖ್ಯೆ:ಎ1.ಅಅಪ್ರ.71A.200/1997-98, ದಿನಾಂಕ:27/03/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಕೆ.ವೇಲು ಬಿನ್ ಕೃಷ್ಣನ್, ನಂ.62, 7ನೇ ಅಡ್ಡರಸ್ತೆ, ಮುದ್ದಪ್ಪ ಗಾರ್ಡನ್, ದಯಾನಂದನಗರ, ಶ್ರೀರಾಂಪುರಂ, ಬೆಂಗಳೂರು-21. (ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:08-02-1998ರಂದು ಬೆಂಗಳೂರು ನಗರ, ಬಾಗಲಗುಂಟೆ ಗ್ರಾಮದ ಸರ್ವೆ ನಂ.111ರಲ್ಲಿ ಪರಿವರ್ತನೆ ಮಾಡಿರುವ ಲೇಔಟ್‌ನ ಸೈಟ್ ನಂ.17ರಲ್ಲಿ ಕಟ್ಟಿದ್ದ ಸಿಮೆಂಟ್ ಗೋಡಾನಿನಲ್ಲಿ ಅಕ್ರಮವಾಗಿ ಬೀಟೆ ಮರದ ನಾಟಾಗಳನ್ನು ದಾಸ್ತಾನು ಮಾಡಿರುವ ಬಗ್ಗೆ ದೂರವಾಣಿ ಮುಖಾಂತರ ಬಂದ ಖಚಿತ ಮಾಹಿತಿಯ ಮೇಲೆ ಜಾಗೃತ ದಳದ ಸಿಬ್ಬಂದಿಗಳು ಹಾಗೂ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಸದರಿ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಲಾಗಿ, ಹೆಸರಘಟ್ಟದ ಕೇಂದ್ರ ಪಶು ಸಂಗೋಪನೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಡಾ॥ಕೆ.ನಾಗೇಶ್ವರರಾವ್ ಇವರಿಗೆ ಸೇರಿದ ಗೋಡಾನ್ ಆಗಿದ್ದು, ಸದರಿ ಗೋಡಾನಿನಲ್ಲಿ 08 ಬೀಟೆ ದಿಮ್ಮಿಗಳನ್ನು ದಾಸ್ತಾನು ಮಾಡಿರುವುದು ಕಂಡುಬಂದಿರುತ್ತದೆ. ಬೀಟೆ ದಿಮ್ಮಿಗಳನ್ನು ದಾಸ್ತಾನು ಮಾಡಲು ಸೂಕ್ತ ದಾಖಲೆಗಳನ್ನು ಒದಗಿಸುವಂತೆ ಆಸಾಮಿಯನ್ನು ಕೇಳಲಾಗಿ, ಆಸಾಮಿಯು ಹೊಸದಾಗಿ ಮನೆ ಕಟ್ಟಿಸಲು ಬೆಂಗಳೂರು ನಗರದ ವಾಸಿಯಾದ ಕೆ.ವೇಲು ಬಿನ್ ಕೃಷ್ಣನ್ ಇವರಿಂದ ಪಡೆದಿರುವುದಾಗಿ, ಹಾಗೂ ಇದಕ್ಕೆ ಸಂಬಂಧಿಸಿದ ಇಲಾಖಾ ರಹದಾರಿ ಪತ್ರವನ್ನು ತಂದುಕೊಡುವುದಾಗಿ ಒಪ್ಪಿಕೊಂಡು ತನ್ನ ಗೋಡಾನಿನಲ್ಲಿ ದಾಸ್ತಾನು ಮಾಡಿದ್ದು, ಆಸಾಮಿಯಿಂದ ಯಾವುದೇ ಇಲಾಖಾ ರಹದಾರಿ ಪಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ.

2. ಡಾ॥ಕೆ.ನಾಗೇಶ್ವರರಾವ್ ಇವರು ನೀಡಿರುವ ಹೇಳಿಕೆಯನ್ವಯ ಕೆ.ವೇಲು ಬಿನ್ ಕೃಷ್ಣನ್, ಮುದ್ದಪ್ಪ ಗಾರ್ಡನ್ ವಾಸಿ, ದಯಾನಂದನಗರ, ಶ್ರೀರಾಮಪುರಂ, ಬೆಂಗಳೂರು ಇವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿ, ಮಡಿಕೇರಿ ಮೂಲದ ತನ್ನ ಸ್ನೇಹಿತನಾದ ಸುರೇಶ್ ಎಂಬುವವರಿಂದ ಸದರಿ ಬೀಟೆ ಮರದ ನಾಟಾಗಳನ್ನು ತರಿಸಿ ಮಾರಾಟ ಮಾಡಿರುವುದಾಗಿ ಹಾಗೂ ಬೀಟೆ ಮರದ ನಾಟಾಗಳನ್ನು ಸಾಗಣೆ ಮಾಡಲು ಇಲಾಖೆಯ ಯಾವುದೇ ವಿಧವಾದ ರಹದಾರಿಯಾಗಲೀ, ಬಿಲ್ಲುಗಳಾಗಲೀ ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ.

3. ಆರೋಪಿ ಕೆ.ವೇಲು ಇವರು ಈ ಹಿಂದೆಯೂ ಸಹ ಇದೇ ರೀತಿ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 104ಎ 1 ರಿಂದ 8 ಹಾಗೂ 104 ಡಿ, 71ಎ ಮತ್ತು ಕರ್ನಾಟಕ ಅರಣ್ಯ ನಿಯಮವಾಳಿ 1969ರ ನಿಯಮ 127, 144, 165ರ ಉಲ್ಲಂಘನೆಯಾಗಿರುವುದರಿಂದ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ಒಟ್ಟು 1.112 ಘನ ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ ಕೆ.ವೇಲು ಇವರನ್ನು ದಸ್ತಗಿರಿ ಮಾಡಿ ಘನ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ವಶಕ್ಕೆ ಒಳಪಡಿಸಲಾಗಿದೆ. ಹೆಚ್ಚಿನ ತನಿಖೆಗಾಗಿ ಜಪ್ತು ಮಾಡಲಾದ ಮಾಲನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿದ್ದು, ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಜಾರಕಬಂಡೆ ದಾಸ್ತಾನು ಮಳಿಗೆಯ ಉಗ್ರಾಣದಲ್ಲಿ ದಾಸ್ತಾನಿರಿಸಲಾಗಿದೆ.

4. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಬೀಟೆ ಮರದ ತುಂಡುಗಳನ್ನು ದಾಸ್ತಾನು ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆಯ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ ಒಟ್ಟು 1.112 ಘನ

ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

5. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ವಿ.ಶ್ರೀನಿವಾಸಪ್ಪ ಬಿನ್ ಲೇಟ್.ವರದಪ್ಪ, ನಿವೃತ್ತ ವಲಯ ಅರಣ್ಯಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಎಸ್.ಎಂ.ಸಿದ್ದಪ್ಪ ಬಿನ್ ಮಾದಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ಪಿ.ಆರ್.ನಂಜುಂಡಶೆಟ್ಟಿ ಬಿನ್ ರಾಜಶೆಟ್ಟಿ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಹೆಚ್.ವೀರಪ್ಪ ಬಿನ್ ಹುಚ್ಚಹನುಮಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

6. ಸರ್ಕಾರಿ ಸಾಕ್ಷಿಗಳು ನೀಡಿದ ಹೇಳಿಕೆಗಳನ್ನು ಪರಿಶೀಲಿಸಲಾಗಿ, ದಿನಾಂಕ:08-02-1998ರಂದು ಬೆಂಗಳೂರು ನಗರದ ಬಾಗಲಗುಂಟೆ ಗ್ರಾಮದ ಸರ್ವೆ ನಂ.111ರಲ್ಲಿ ಪರಿವರ್ತನೆ ಮಾಡಿರುವ ಸೈಟ್ ನಂ.17ರಲ್ಲಿ ಕಟ್ಟಲಾಗಿದ್ದ ಸಿಮೆಂಟ್ ಗೋಡಾನಿನಲ್ಲಿ ಅಕ್ರಮವಾಗಿ ಒಟ್ಟು 1.112 ಘನ ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಲ್ಲಂಘನೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

7. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಆರೋಪಿ ಹಾಗೂ ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

8(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 1.112 ಘನ ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 104 ಎ ಮತ್ತು ನಿಯಮ 1969 ರ ನಿಯಮ 144 ಗಳ ಉಲ್ಲಂಘನೆಯಾಗಿದೆಯೇ?

8(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 1.112 ಘನ ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

8(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

8(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

8(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

8(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

9. ದಿನಾಂಕ:08-02-1998ರಂದು ಬೆಂಗಳೂರು ನಗರದ ಬಾಗಲಗುಂಟೆ ಗ್ರಾಮದ ಸರ್ವೆ ನಂ.111ರಲ್ಲಿ ಪರಿವರ್ತನೆ ಮಾಡಿರುವ ಸೈಟ್ ನಂ.17ರಲ್ಲಿ ಕಟ್ಟಲಾಗಿದ್ದ ಸಿಮೆಂಟ್ ಗೋಡಾನಿನಲ್ಲಿ ಅಕ್ರಮವಾಗಿ ಒಟ್ಟು 1.112 ಘನ ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು. ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಬೀಟೆ ಮರದ ದಿಮ್ಮಿಗಳನ್ನು ದಾಸ್ತಾನು ಮಾಡಲು ಇರಬೇಕಾದ ರಹದಾರಿ ಮತ್ತು ಸಂಬಂಧಪಟ್ಟ ದಾಖಲೆಗಳು ಸದರಿ ಸ್ಥಳದಲ್ಲಿ ದೊರಕದೇ ಇರುವುದರಿಂದ ಮತ್ತು ಸದರಿ ಬೀಟೆ ದಿಮ್ಮಿಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಆರೋಪಿ ಒಪ್ಪಿಕೊಂಡಿರುವುದರಿಂದ ಅರಣ್ಯ ಮೊಕದ್ದಮೆಯು ದಾಖಲಾಗಿದ್ದು, ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಬೀಟೆ ಮರದ ದಿಮ್ಮಿಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆದುದರಿಂದ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆಯಾಗಿರುವುದು ಖಾತರಿಯಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 80 ರ ಮೇರೆಗೆ ಅರಣ್ಯೋತ್ಪನ್ನಗಳ ಮಾಲೀಕತ್ವವು ರುಜುವಾತು ಆಗುವವರೆಗೆ ಅವು ಸರ್ಕಾರದ ಸ್ವತ್ತೆಂದು ಭಾವಿಸಲಾಗುವುದು. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 1.112 ಘನ ಮೀಟರ್ ಅಳತೆಯ ಬೀಟೆ ಮರದ ದಿಮ್ಮಿಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಲಾಗಿದೆ. ಸದರಿ ಮಾಲಿಗೆ ಸಂಬಂಧಪಟ್ಟ ಸೂಕ್ತ ರಹದಾರಿ ಹಾಗೂ ಯಾವುದೇ

ದಾಖಲೆಗಳು ಲಭ್ಯವಿಲ್ಲದಿರುವುದರಿಂದ ಅದನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:200/1997-98ರಲ್ಲಿ ಅಮಾನತ್ತುಪಡಿಸಿಕೊಂಡಿರುವ 08 ಬೀಟೆ ಮರದ ದಿಮ್ಮಿಗಳ ಅಳತೆ ಒಟ್ಟು 1.112 ಘನ ಮೀಟರ್‌ಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಪಿ.ಆರ್. 760

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:178/1990-91 ದಿನಾಂಕ:15/10/1990.

ಸಂಖ್ಯೆ:ಎ1.ಅಅಪ್ರ.71A.178/1990-91, ದಿನಾಂಕ:27/03/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:15-10-1990ರಂದು ಖಚಿತ ವರ್ತಮಾನದ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರು-ತುಮಕೂರು ರಸ್ತೆ, ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಸ್ಥಾಪಿತವಾಗಿದ್ದ ಟಿ.ಸಿ.ಐ ಸರಕು ಸಾಗಾಣಿಕೆ ಮಳಿಗೆಗೆ ಭೇಟಿ ನೀಡಿ ಪರಿಶೀಲಿಸಲಾಗಿ, ಮೆ॥ಪ್ರೀಮಿಯರ್ ಏಜೆನ್ಸಿ ಕಂಪನಿಗೆ ಸೇರಿದ ಬಿಲ್ಲಿನ ಸಂಖ್ಯೆ:2238, ಹಾಗೂ 2239ಗಳಲ್ಲಿ ಅಗರಬತ್ತಿ ಸರಕು ಎಂಬುದಾಗಿ ನಮೂದಿಸಲಾಗಿರುತ್ತದೆ. ಸದರಿ ಗೋಣಿಚೀಲದ ಒಟ್ಟು 07 ಬಾಕ್ಸುಗಳನ್ನು ತೆಗೆಯಿಸಿ ನೋಡಲಾಗಿ, ಶ್ರೀಗಂಧದ ಚಕ್ಕೆ, ಕಾಂಡ ಹಾಗೂ ಬೇರುಗಳು ತುಂಬಿದ್ದು, ಇದರ ಒಟ್ಟು ತೂಕ 300 ಕೆ.ಜಿ ಇರುತ್ತದೆ. ಈ ಬಗ್ಗೆ ಟಿ.ಸಿ.ಐ ಸಂಸ್ಥೆಯ ಅಧಿಕಾರಿಗಳನ್ನು ವಿಚಾರಿಸಲಾಗಿ, ಯಾರೋ ಆಸಾಮಿಗಳು ಸುಳ್ಳು ವಿಳಾಸ ನೀಡಿ ಸದರಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ನೋಂದಾಯಿಸಿರುವುದಾಗಿ ತಿಳಿಸಿರುತ್ತಾರೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ-84, 87, ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮ 154 ಉಲ್ಲಂಘನೆಯಾಗಿರುವ ಕಾರಣ, ಪಂಚನಾಮೆಯ ಸಹಿತ ಒಟ್ಟು 300 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಒಟ್ಟು 300 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ಪರವಾನಗಿ ಇಲ್ಲದೇ ಸುಳ್ಳು ವಿಳಾಸ ನೀಡಿ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 300 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ಯು.ಪೋತಪ್ಪ ಬಿನ್ ಲೇಟ್.ಕೆ.ಯು.ಅಂಬಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ) ಹಾಗೂ ಶ್ರೀ.ಟಿ.ಎಸ್.ಶಿವಾನಂದ ಬಿನ್ ಶ್ರೀರಂಗಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ) ಇವರುಗಳ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ. ಸರ್ಕಾರಿ ಪರ ಸಾಕ್ಷಿಗಳು ನೀಡಿರುವ ಹೇಳಿಕೆಯನ್ನು ಪರಿಶೀಲಿಸಲಾಗಿ, ದಿನಾಂಕ: 15-10-1989 ರಂದು ಬೆಂಗಳೂರು-ತುಮಕೂರು ರಸ್ತೆ, ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಸ್ಥಾಪಿತವಾಗಿದ್ದ ಟಿ.ಸಿ.ಐ ಸರಕು ಸಾಗಾಣಿಕೆ ಮಳಿಗೆಯಲ್ಲಿ ಸೂಕ್ತ ಪರವಾನಗಿ ಇಲ್ಲದೇ ಅಕ್ರಮವಾಗಿ 300 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಲ್ಲಂಘನೆ ಮಾಡಿರುವುದು ರುಜುವಾತುಪಡಿಸಿಕೊಳ್ಳಲಾಗಿದೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ಸುಳ್ಳು ವಿಳಾಸ ನೀಡಿ ಸರಕು ಸಾಗಣೆ ಮಳಿಗೆಯಲ್ಲಿ ಅಕ್ರಮವಾಗಿ 300 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಇಲ್ಲದ ಕಾರಣ ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತುಪಡಿಸಿಕೊಳ್ಳಲಾಗಿರುವ ಒಟ್ಟು 300 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತುಪಡಿಸಿಕೊಳ್ಳಲಾಗಿರುವ ಒಟ್ಟು 300 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:15-10-1990ರಂದು ಬೆಂಗಳೂರು-ತುಮಕೂರು ರಸ್ತೆ, ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಸ್ಥಾಪಿತವಾಗಿದ್ದ ಟಿ.ಸಿ.ಐ ಸರಕು ಸಾಗಾಣಿಕೆ ಮಳಿಗೆಯಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಪರಿಶೀಲನೆ ನಡೆಸಿದಾಗ ಮೆ॥ಪ್ರೀಮಿಯರ್ ಏಜೆನ್ಸಿ ಕಂಪನಿಗೆ ಸೇರಿದ ಬಿಲ್ಲುಗಳಲ್ಲಿ ಅಗರಭತ್ತಿ ಸರಕು ಎಂಬುದಾಗಿ ನಮೂದಾಗಿದ್ದು, ಗೋಣಿಚೀಲದ ಒಟ್ಟು 07 ಪಾರ್ಸಲ್ ಬಾಕ್ಸುಗಲ್ಲಿ 300 ಕೆ.ಜಿ ಶ್ರೀಗಂಧದ ಚಕ್ಕೆ, ಕಾಂಡ ಹಾಗೂ ಬೇರುಗಳು ತುಂಬಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಣೆ ಮಾಡಲು ಸರಕು ಸಾಗಾಣಿಕೆ ಸಂಸ್ಥೆಗೆ ಸುಳ್ಳು ವಿಳಾಸ ನೀಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಗಳು ಪತ್ತೆಯಾಗದ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ಸರಕು ಸಾಗಾಣಿಕೆ ಸಂಸ್ಥೆಯ ಮುಖಾಂತರ ಸಾಗಣೆ ಮಾಡಲು ಯತ್ನಿಸಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 300 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 300 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:178/1990-91ರಲ್ಲಿ

ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 300 ಕೆ.ಜಿ ಶ್ರೀಗಂಧದ ಮರದ ಚಕ್ಕೆ, ಕಾಂಡ ಹಾಗೂ ಬೇರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರವಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:182/1990-91 ದಿನಾಂಕ:25/10/1990.

ಸಂಖ್ಯೆ:ಎ1.ಅಅಪ್ರ.71A.182/1990-91, ದಿನಾಂಕ:27/03/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:25-10-1990ರಂದು ಖಚಿತ ವರ್ತಮಾನದ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರು ನಗರದ ರಾಜಾಜಿನಗರ 5ನೇ ಬ್ಲಾಕ್, ನಂ.1, 72 ಕ್ರಾಸ್, ಜಡಹಳ್ಳಿಯಲ್ಲಿರುವ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ದಾಸ್ತಾನು ಮಳಿಗೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಮೆ॥ಬಾಲಾಜಿ ಎಂಟರ್‌ಪ್ರೈಸಸ್ ಕಂಪನಿಗೆ ಸೇರಿದ ಬಿಲ್ಲಿನ ಸಂಖ್ಯೆ:101ರಲ್ಲಿ ಡೆಲ್ಲಿಗೆ ಸಾಗಣೆ ಮಾಡಲು ಇಡಲಾಗಿದ್ದ 07 ಬಂಡಲ್‌ಗಳನ್ನು ತೆಗೆಯಿಸಿ ನೋಡಲಾಗಿ, ಅದರಲ್ಲಿ ಶ್ರೀಗಂಧದ ತುಂಡು, ಚಕ್ಕೆ ಮತ್ತು ಬೇರುಗಳು ತುಂಬಿದ್ದು, ಅದರ ಒಟ್ಟು ತೂಕ 200 ಕೆ.ಜಿ ಇರುತ್ತದೆ. ಈ ಬಗ್ಗೆ ಟಿ.ಸಿ.ಐ ಸಂಸ್ಥೆಯ ಅಧಿಕಾರಿಗಳನ್ನು ವಿಚಾರಿಸಲಾಗಿ, ಯಾರೋ ಆಸಾಮಿಗಳು ಸುಳ್ಳು ವಿಳಾಸ ನೀಡಿ ಸದರಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ನೊಂದಾಯಿಸಿರುವುದಾಗಿ ತಿಳಿಸಿರುತ್ತಾರೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ-84, 87, ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮ 154 ಉಲ್ಲಂಘನೆಯಾಗಿರುವ ಕಾರಣ, ಪಂಚನಾಮೆಯ ಸಹಿತ ಒಟ್ಟು 200 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಒಟ್ಟು 200 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ಪರವಾನಗಿ ಇಲ್ಲದೇ ಸುಳ್ಳು ವಿಳಾಸ ನೀಡಿ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 200 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ಯು.ಪೋತಪ್ಪ ಬಿನ್ ಲೇಟ್.ಕೆ.ಯು.ಅಂಬಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ಟಿ.ಎಸ್.ಶಿವಾನಂದ ಬಿನ್ ಶ್ರೀರಂಗಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಕೆ.ಎಸ್.ರಾಜೇಂದ್ರ ಬಿನ್ ಚನ್ನವೀರಪ್ಪ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ರಾಮಚಂದ್ರ ಬಿನ್ ಲೇಟ್.ಪುಟ್ಟಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ. ಸರ್ಕಾರಿ ಪರ ಸಾಕ್ಷಿಗಳು ನೀಡಿರುವ ಹೇಳಿಕೆಯನ್ನು ಪರಿಶೀಲಿಸಲಾಗಿ, ದಿನಾಂಕ:25-10-1990 ರಂದು ಬೆಂಗಳೂರು ನಗರದ ರಾಜಾಜಿನಗರ 5ನೇ ಬ್ಲಾಕ್, ನಂ.1, 72

ಕ್ರಾಸ್, ಜಡಹಳ್ಳಿಯಲ್ಲಿರುವ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ದಾಸ್ತಾನು ಮಳಿಗೆಯಲ್ಲಿ ಸೂಕ್ತ ಪರವಾನಗಿ ಇಲ್ಲದೇ ಅಕ್ರಮವಾಗಿ 200 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಲ್ಲಂಘನೆ ಮಾಡಿರುವುದು ರುಜುವಾತುಪಡಿಸಿಕೊಳ್ಳಲಾಗಿದೆ.

4. ಹಾಜರುಪಡಿಸಲ್ಪಟ್ಟ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ಸುಳ್ಳು ವಿಳಾಸ ನೀಡಿ ಸರಕು ಸಾಗಣೆ ಮಳಿಗೆಯಲ್ಲಿ ಅಕ್ರಮವಾಗಿ 200 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಇಲ್ಲದ ಕಾರಣ ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 200 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 200 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:25-10-1990ರಂದು ಬೆಂಗಳೂರು ನಗರದ ರಾಜಾಜಿನಗರ 5ನೇ ಬ್ಲಾಕ್, ನಂ.1, 72 ಕ್ರಾಸ್, ಜಡಹಳ್ಳಿಯಲ್ಲಿರುವ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ದಾಸ್ತಾನು ಮಳಿಗೆಯಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಪರಿಶೀಲನೆ ನಡೆಸಿದಾಗ ಮೆ॥ಬಾಲಾಜಿ ಎಂಟರ್‌ಪ್ರೈಸಸ್ ಕಂಪನಿಗೆ ಸೇರಿದ ಜಲ್ಲಿನ 07 ಪಾರ್ಸಲ್ ಬಾಕ್ಸುಗಳಲ್ಲಿ 200 ಕೆ.ಜಿ ಶ್ರೀಗಂಧದ ತುಂಡು, ಚಕ್ಕೆ ಹಾಗೂ ಬೇರುಗಳು ತುಂಬಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಣೆ ಮಾಡಲು ಸರಕು ಸಾಗಾಣಿಕೆ ಸಂಸ್ಥೆಗೆ ಸುಳ್ಳು ವಿಳಾಸ ನೀಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಗಳು ಪತ್ತೆಯಾಗದ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ಸರಕು ಸಾಗಾಣಿಕೆ ಸಂಸ್ಥೆಯ ಮುಖಾಂತರ ಸಾಗಣೆ ಮಾಡಲು ಯತ್ನಿಸಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 200 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 200 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಪಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:182/1990-91ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 200 ಕೆ.ಜಿ ಶ್ರೀಗಂಧದ ಮರದ ತುಂಡು, ಚಕ್ಕೆ ಹಾಗೂ ಬೇರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 204/1993-94 ದಿನಾಂಕ:04/09/1993.

ಸಂಖ್ಯೆ:ಎ1.ಅಅಪ್ರ.71A.204/1993-94, ದಿನಾಂಕ:27/03/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಪ್ಯಾರೇಜಾನ್ ಬಿನ್ ಅಬ್ದುಲ್ ಸತ್ತಾರ್, ರಸೀಲ್ದಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು (ತಲೆಮರೆಸಿಕೊಂಡಿರುತ್ತಾರೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:04-09-1993ರಂದು ಸಂಜೆ 4.30ರ ಸಮಯದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಉಲ್ಲಂಘನೆ ಬಗ್ಗೆ ಬಂದ ಖಚಿತ ಮಾಹಿತಿಯ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರು ನಗರ, ಶೇಷಾದ್ರಿಪುರಂನಲ್ಲಿರುವ ರಶೀಲ್ದಾರ್ ಸ್ಟ್ರೀಟ್‌ನ ಮನೆ ನಂ.105ಕ್ಕೆ ಭೇಟಿ ಸದರಿ ಮನೆಯ ಬಾಗಿಲನ್ನು ತೆರೆದು ನೋಡಲಾಗಿ, ಮೂರು ಗೋಣಿಚೀಲದಲ್ಲಿ ಕಟ್ಟಿಗೆಯನ್ನು ತುಂಬಿರುವುದು ಕಂಡುಬಂದಿರುತ್ತದೆ. ಸದರಿ ಕಟ್ಟಿಗೆಯನ್ನು ತುಂಬಿದ ಚೀಲಗಳನ್ನು ಪರಿಶೀಲಿಸಿ ನೋಡಲಾಗಿ, ಶ್ರೀಗಂಧದ ಮರದ ಚಿಕ್ಕ ತುಂಡುಗಳು ಹಾಗೂ ಬೇರುಗಳು ಇದ್ದು, ಅವುಗಳ ತೂಕ ಮಾಡಲಾಗಿ, ಒಟ್ಟು 140 ಕೆ.ಜಿ. ಇರುತ್ತದೆ. ಮುಂದುವರೆದು ಸದರಿ ಮನೆಯಲ್ಲಿ ಯಾರೂ ಸಹ ವಾರಸುದಾರರು ಇಲ್ಲದಿದ್ದ ಕಾರಣ, ಅಕ್ಕಪಕ್ಕದವರನ್ನು ವಿಚಾರಿಸಲಾಗಿ, ಮನೆಯು ಶ್ರೀ.ಪ್ಯಾರೇಜಾನ್ ಬಿನ್ ಅಬ್ದುಲ್ ಸತ್ತಾರ್ ಎಂಬುವವರಿಗೆ ಸೇರಿದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ವ್ಯಕ್ತಿಯು ತಲೆಮರೆಸಿಕೊಂಡಿರುವುದಾಗಿ ತಿಳಿದುಬಂದ ಹಿನ್ನೆಲೆಯಲ್ಲಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ಒಟ್ಟು 140 ಕೆ.ಜಿ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಒಟ್ಟು 140 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 140 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಟಿ.ಕೆ.ಮುನಿರಾಜು ಬಿನ್ ಕೆಂಪಣ್ಣ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಬಿ.ಆರ್.ಡಿ.ಜಗದೀಶ್ ಗೌಡ ಬಿನ್ ರಾಮಣ್ಣ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ. ಸರ್ಕಾರಿ ಪರ ಸಾಕ್ಷಿಗಳು ನೀಡಿರುವ ಹೇಳಿಕೆಯನ್ನು ಪರಿಶೀಲಿಸಲಾಗಿ, ದಿನಾಂಕ:04-09-1993 ರಂದು ಬೆಂಗಳೂರು ನಗರ, ಶೇಷಾದ್ರಿಪುರಂನಲ್ಲಿರುವ ರಶೀಲ್ದಾರ್ ಸ್ಟ್ರೀಟ್ ನ ಮನೆ ನಂ.105ರಲ್ಲಿ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಲ್ಲಂಘನೆ ಮಾಡಿರುವುದು ರುಜುವಾತುಪಡಿಸಿಕೊಳ್ಳಲಾಗಿದೆ. ಸದರಿ ಮನೆಯಲ್ಲಿ ದಾಸ್ತಾನು ಮಾಡಿದ್ದ ಶ್ರೀಗಂಧದ ಬಗ್ಗೆ ಸರ್ಕಾರಿ ಪರ ಸಾಕ್ಷಿ ಶ್ರೀ.ಡಿ.ಸಿ.ನಾರಾಯಣ ಮೂರ್ತಿ ಬಿನ್ ಎನ್.ಚನ್ನಕೇಶವಯ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರು ಶ್ರೀಗಂಧದ ದೃಢೀಕರಣ ನೀಡಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 140 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 140 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 140 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:04-09-1993ರಂದು ಬೆಂಗಳೂರು ನಗರ, ಶೇಷಾದ್ರಿಪುರಂನಲ್ಲಿರುವ ರಶೀಲ್ದಾರ್ ಸ್ಟ್ರೀಟ್‌ನ ಮನೆ ನಂ.105ರಲ್ಲಿ ಅಕ್ರಮವಾಗಿ ಒಟ್ಟು 140 ಕೆ.ಜಿ ತೂಕವುಳ್ಳ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯು ತಲೆಮರೆಸಿಕೊಂಡಿರುವ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 140 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 140 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

<u>ಆದೇಶ</u>

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:204/1993-94ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 140 ಕೆ.ಜಿ ಶ್ರೀಗಂಧದ ಮರದ ಚಿಕ್ಕ ತುಂಡುಗಳು ಹಾಗೂ ಬೇರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 148/1990-91 ದಿನಾಂಕ:15/09/1990.

ಸಂಖ್ಯೆ:ಎ1.ಅಅಪ್ರ.71A.148/1990-91, ದಿನಾಂಕ:30/01/2012

ಉಪಸ್ಥಿತರು	:	ಶ್ರೀ.ಕೆ.ಜಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಪ್ರತಾಪ್ ಬಿನ್ ವೀರಾರೆಡ್ಡಿ, ಕಡಪ ಜಿಲ್ಲೆ, ಆಂಧ್ರಪ್ರದೇಶ. (ಬಂಧಿಸಿದೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:15-09-1990ರಂದು ಬೆಳಿಗ್ಗೆ 08 ಗಂಟೆಯ ಸಮಯದಲ್ಲಿ ಬೆಂಗಳೂರು ನಗರದ ಹೈದರಾಬಾದ್ ರಸ್ತೆಯಲ್ಲಿರುವ ವಾಣಿಜ್ಯ ತೆರಿಗೆ ತನಿಖಾ ಠಾಣೆ ಬಳಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ತಪಾಸಣಾ ಕಾರ್ಯದಲ್ಲಿ ನಿರತರಾಗಿದ್ದಾಗ ಹೈದರಾಬಾದ್ ಕಡೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಆಂಧ್ರಪ್ರದೇಶದ ಸರ್ಕಾರಿ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಸಂಖ್ಯೆ: ಎಪಿ-9-ಜೆಡ್-253 ಅನ್ನು ವಾಣಿಜ್ಯ ತೆರಿಗೆ ಅಧಿಕಾರಿಗಳು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳು ಗುಮಾನಿ ಮೇಲೆ ತಡೆದು ನಿಲ್ಲಿಸಿ ಪರಿಶೋಧನೆ ಮಾಡುವಾಗ ಬಸ್ಸಿನ ಒಳಗಡೆ ಇದ್ದ ಆಸಾಮಿಯು ಒಂದು ರಟ್ಟಿನ ಬಾಕ್ಸನ್ನು ಮತ್ತು ಒಂದು ಸೂಟ್‌ಕೇಸನ್ನು ಇಟ್ಟುಕೊಂಡಿರುವುದು ಕಂಡುಬಂದು ನಂತರ ಸದರಿ ಪೆಟ್ಟಿಗೆಯನ್ನು ಒಂದು ಕಡೆ ಒಡೆದು ನೋಡಲಾಗಿ, ಅದರಲ್ಲಿ ಶ್ರೀಗಂಧದ ಸಣ್ಣ ತುಂಡುಗಳು ಇರುವುದು ಕಂಡುಬಂದಿರುತ್ತದೆ. ತದನಂತರ ಆಸಾಮಿಯನ್ನು ಮಾಲು ಸಮೇತ ಇಲಾಖಾ ಪರ ವಶಪಡಿಸಿಕೊಂಡು ತನಿಖೆ ಮಾಡಲಾಗಿ, ಆಂಧ್ರಪ್ರದೇಶದ ಕಡಪದಿಂದ ಬೆಂಗಳೂರಿನ ಕಟ್ಟಿಗೇನಹಳ್ಳಿಯಲ್ಲಿರುವ ಆಸಾಮಿಗೆ ನೀಡಲು ತಂದಿರುವುದಾಗಿ ತಿಳಿಸಿರುತ್ತಾನೆ. ಆಸಾಮಿಯ ಹೆಸರು ಮತ್ತು ವಿಳಾಸ ಕೇಳಲಾಗಿ, ಪ್ರತಾಪ್ ಬಿನ್ ವೀರಾರೆಡ್ಡಿ, ವಯಸ್ಸು 19 ವರ್ಷ, ಕಡಪ ಜಿಲ್ಲೆ, ಆಂಧ್ರಪ್ರದೇಶ ಎಂದು ತಿಳಿಸಿರುತ್ತಾನೆ. ಆಸಾಮಿಯ ಬಳಿ ಇದ್ದ ಶ್ರೀಗಂಧವನ್ನು ತೂಕ ಮಾಡಲಾಗಿ, ಒಟ್ಟು 23 ಕೆ.ಜಿ ಶ್ರೀಗಂಧದ ತುಂಡುಗಳಿರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಆರೋಪಿಯನ್ನು ಹಾಗೂ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಬಂಧಿಸಲಾದ ಆರೋಪಿಯನ್ನು ಮಾನ್ಯ 3ನೇ ಎ.ಸಿ.ಎಂ.ಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ ನಂತರ ಆರೋಪಿಯನ್ನು ನ್ಯಾಯಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ.

2. ಹೆಚ್ಚಿನ ತನಿಖೆಗಾಗಿ 23 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

3. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 23 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

4. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಆರ್.ಶಿವಕುಮಾರ್ ಬಿನ್ ವಿ.ಆರ್.ರಾಮಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ), ಶ್ರೀ.ಹೆಚ್.ಶಿವಾನಂದ ಬಿನ್ ಹೊನ್ನಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಟಿ.ಎಸ್.ಶಿವಾನಂದ ಬಿನ್ ಶ್ರೀ.ರಂಗಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:20-01-2012 ರಂದು ಪಡೆದಿರುತ್ತಾರೆ. ಶ್ರೀ.ಎಸ್.ಎನ್.ರಂಗಯ್ಯ, ವನಪಾಲಕ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ಒಟ್ಟು 23 ಕೆ.ಜಿ ಶ್ರೀಗಂಧದವನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 23 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳನ್ನು ಸಾಗಣೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 23 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:15-09-1990ರಂದು ಹೈದರಾಬಾದ್ ಕಡೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಆಂಧ್ರಪ್ರದೇಶದ ಸರ್ಕಾರಿ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಸಂಖ್ಯೆ:ಎಪಿ-9-ಜೆಡ್-253 ರಲ್ಲಿ ಆರೋಪಿಯು ಒಂದು ರಟ್ಟಿನ ಬಾಕ್ಸನ್ನು ಮತ್ತು ಒಂದು ಸ್ಯೂಟ್‌ಕೇಸ್‌ನಲ್ಲಿ 23 ಕೆ.ಜಿ ಶ್ರೀಗಂಧದ ತುಂಡುಗಳನ್ನು ಇಟ್ಟುಕೊಂಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 23 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 23 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:148/1990-91ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 23 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:30-01-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 88/1993-94 ದಿನಾಂಕ:25/06/1993.

ಸಂಖ್ಯೆ:ಎ1.ಅಅಪ್ರ.71A.88/1993-94, ದಿನಾಂಕ:31/01/2012

ಉಪಸ್ಥಿತರು : ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಫಿರ್ಯಾದಿ : ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.

ಅರ್ಜಿದಾರರು : 1–ಪ್ಯಾರೇಜಾನ್ ಬಿನ್ ಅಬ್ದುಲ್ ಸತ್ತಾರ್,
ಆರೋಪಿಗಳು ರಸೀಲ್ದಾರ್ ಸ್ಟ್ರೀಟ್. ಶೇಷಾದ್ರಿಪುರಂ, ಬೆಂಗಳೂರು.

2–ಆನಂದ ಬಿನ್ ತಿಮ್ಮಯ್ಯ, ದಾಬಸ್‌ಪೇಟೆ, ಬೆಂಗಳೂರು ಜಿಲ್ಲೆ.

3–ನರಸಯ್ಯ ಬಿನ್ ನರಸಿಂಹಯ್ಯ,
ಹೆಗ್ಗುಂದ, ದಾಬಸ್‌ಪೇಟೆ, ಬೆಂಗಳೂರು ಜಿಲ್ಲೆ.
(1 ರಿಂದ 3ರ ವರೆಗಿನ ಆರೋಪಿಗಳನ್ನು ಬಂಧಿಸಿದೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:25–06–1993ರಂದು ಬೆಳಿಗ್ಗೆ 7.30ರ ಸಮಯದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಉಲ್ಲಂಘನೆ ಬಗ್ಗೆ ದೊರೆತ ದೂರಿನನ್ವಯ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರಿನ ಎಸ್.ಸಿ ರಸ್ತೆಯಲ್ಲಿರುವ ವಹಬ್ ಮಂಜಿಲ್ ರ ವಸತಿ ಗೃಹಗಳ ಬಳಿ ತೆರಳಿ ದೂರು ಅರ್ಜಿಯಲ್ಲಿ ಕಾಣಿಸಿರುವ ಶ್ರೀ.ಪ್ಯಾರೇಜಾನ್ ಎಂಬುವವರನ್ನು ಬರಮಾಡಿಕೊಂಡು ದೂರು ಅರ್ಜಿಯಲ್ಲಿ ಆಪಾದಿಸಲಾದ ಪ್ಯಾರೇಜಾನ್ ರವರ ತಮ್ಮನಾದ ವಜೀದ್ ಎಂಬುವವರನ್ನು ಇಲಾಖಾ ವಶಕ್ಕೆ ಒಪ್ಪಿಸುವಂತೆ ಕೇಳಲಾಗಿ, ಪ್ಯಾರೇಜಾನ್ ಹಾಗೂ ಅವರ ಪತ್ನಿ, ಹಾಲಿ ಸ್ಥಳದಲ್ಲಿ ವಜೀದ್ ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಅಲ್ಲಿನ ಎಲ್ಲಾ ನಂಬರಿನ ವಸತಿ ಗೃಹಗಳನ್ನು ಮತ್ತು ಖಾಲಿ ಇದ್ದ ವಸತಿ ಗೃಹಗಳನ್ನು ಶೋಧಿಸಿ ನೋಡುತ್ತಿದ್ದಾಗ ಮನೆ ಸಂಖ್ಯೆ:105ರಲ್ಲಿ ಇಬ್ಬರು ಆಸಾಮಿಗಳು ಸಂದೇಹಾಸ್ಪದವಾಗಿ ಅಡಗಿ ಕುಳಿತಿದ್ದದನ್ನು ಕಂಡು ಅವರನ್ನು ತಪಾಸಣೆ ಮಾಡಲಾಗಿ, ಅವರ ಬಳಿ ಪ್ಲಾಸ್ಟಿಕ್ ಚೀಲದಲ್ಲಿ ಮರದ ತುಂಡುಗಳು ಮತ್ತು ಚಕ್ಕೆಗಳು ಇರುವುದು ಕಂಡುಬಂದಿರುತ್ತದೆ. ನಂತರ ಅದನ್ನು ಗ್ರಹಿಸಿ ನೋಡಲಾಗಿ, ಶ್ರೀಗಂಧವೆಂದು ಖಾತರಿಪಡಿಸಿಕೊಂಡು ಸದರಿ ಇಬ್ಬರು ಆಸಾಮಿಗಳನ್ನು ವಿಚಾರಿಸಲಾಗಿ, 1ನೇ ಆಸಾಮಿ ಬೆಂಗಳೂರು ಜಿಲ್ಲೆ, ದಾಬಸ್‌ಪೇಟೆ ಹೋಬಳಿಗೆ ಸೇರಿದ ಹೆಗ್ಗುಂದ ಗ್ರಾಮವಾಸಿ ಶ್ರೀ.ತಿಮ್ಮಯ್ಯ ಎಂಬುವವರ ಮಗ ಆನಂದ ಎಂದು ಹಾಗೂ 2ನೇ ಆಸಾಮಿ ಅದೇ ಗ್ರಾಮದ ನರಸಿಂಹಯ್ಯ ಎಂಬುವವರ ಮಗ ನರಸಯ್ಯ ಎಂದು ತಿಳಿಸಿರುತ್ತಾರೆ.

2. ಸದರಿ ಶ್ರೀಗಂಧದ ತುಂಡುಗಳನ್ನು ತುಮಕೂರಿನ ದೇವರಾಯನದುರ್ಗದ ನಾಮದಚಿಲುಮೆ ಅರಣ್ಯ ಪ್ರದೇಶದಲ್ಲಿ ಕಡಿದು ತಂದು ಪ್ಯಾರೇಜಾನ್ ರವರಿಗೆ ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿರುತ್ತಾರೆ. ಶ್ರೀಗಂಧದ ತುಂಡು ಮತ್ತು ಚಕ್ಕೆಯನ್ನು ತೂಕ ಮಾಡಲಾಗಿ, ಒಟ್ಟು 12 ಕೆ.ಜಿ ಇರುತ್ತದೆ. ಸದರಿ ಶ್ರೀಗಂಧವು ಸರ್ಕಾರದ ಸ್ವತ್ತಾಗಿದ್ದು, ಶ್ರೀಗಂಧವನ್ನು ಸಾಗಣೆ ಮಾಡಲು ಆಸಾಮಿಗಳ ಬಳಿ ಯಾವುದೇ ಸೂಕ್ತ ದಾಖಲಾತಿಗಳು ಇರುವುದಿಲ್ಲ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969 ಉಲ್ಲಂಘಿಸಿರುವುದರಿಂದ ಪ್ಯಾರೇಜಾನ್, ಆನಂದ ಹಾಗೂ ನರಸಯ್ಯ ಎಂಬ ಮೂರು ಆರೋಪಿಗಳನ್ನು ಬಂಧಿಸಿ ಅವರ ಬಳಿ ಇದ್ದ 12 ಕೆ.ಜಿ ಶ್ರೀಗಂಧದ ತುಂಡು ಹಾಗೂ ಚಕ್ಕೆಯನ್ನು ಪಂಚನಾಮೆಯ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಒಟ್ಟು 12 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

3. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84, 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 12 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

4. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಬಿ.ಆರ್.ಡಿ.ಜಗದೀಶ್ ಗೌಡ ಬಿನ್ ರಾಮಣ್ಣ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ), ಶ್ರೀ.ಎಂ.ಸಂಜೀವಪ್ಪ ಬಿನ್ ಮುನಿಯಪ್ಪ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ), ಶ್ರೀ.ಲಕ್ಷ್ಮಿನರಸಿಂಹಯ್ಯ ಬಿನ್ ಉಗ್ರಯ್ಯ, ಅರಣ್ಯ ರಕ್ಷಕ, ಶ್ರೀ.ಎಸ್.ಕೆ.ಲಕ್ಷ್ಮಿಗೌಡ, ವಾಹನ ಚಾಲಕ ಇವರುಗಳ ಮುಖ್ಯ ವಿಚಾರಣೆಯನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ. ಆರೋಪಿಗಳು ಗೈರು ಹಾಜರು ಇರುವುದರಿಂದ ಪಾಟಿ ಸವಾಲು ಮಾಡಿರುವುದಿಲ್ಲ.

5. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 12 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

6. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

7(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 12 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84, 87ರ ಉಲ್ಲಂಘನೆಯಾಗಿದೆಯೇ?

7(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 12 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

7(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

7(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

8. ದಿನಾಂಕ:25-06-1993ರಂದು ಬೆಂಗಳೂರಿನ ಎಸ್.ಸಿ ರಸ್ತೆಯಲ್ಲಿರುವ ವಹಬ್ ಮಂಜಿಲ್ ರ ವಸತಿ ಗೃಹಗಳ ಪೈಕಿ ಮನೆ ಸಂಖ್ಯೆ:105ರಲ್ಲಿ ಇಬ್ಬರು ಆಸಾಮಿಗಳು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು 12 ಕೆ.ಜಿ ಶ್ರೀಗಂಧವನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯು ತಲೆಮರೆಸಿಕೊಂಡಿರುವ ಕಾರಣ, ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 12 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

9. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 12 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:88/1993-94ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 12 ಕೆ.ಜಿ ಶ್ರೀಗಂಧದ ಮರದ ತುಂಡುಗಳು ಹಾಗೂ ಚಕ್ಕೆಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:31-01-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಪಿ.ಆರ್. 761

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:102/1993-94 ದಿನಾಂಕ:04/07/1993.

ಸಂಖ್ಯೆ:ಎ1.ಅಅಪ್ರ.71A.102/1993-94, ದಿನಾಂಕ:31/01/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಅಂಕಯ್ಯ ಬಿನ್ ಬಾಲಯ್ಯ, ಅಂಜನೇಯಪುರಂ ಗ್ರಾಮ, ಕಡಪ ತಾಲ್ಲೂಕು, ಆಂಧ್ರಪ್ರದೇಶ.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:04-07-1993ರಂದು ಸಾಯಂಕಾಲ 4.00 ಗಂಟೆ ಸಮಯದಲ್ಲಿ ಹೊಸಕೋಟೆ ತಾಲ್ಲೂಕು, ಮಾಲೂರು ರಸ್ತೆಯಲ್ಲಿರುವ ಕಟ್ಟಿಗೇನಹಳ್ಳಿ ಕ್ರಾಸ್ ಬಳಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ತಪಾಸಣಾ ಕಾರ್ಯದಲ್ಲಿ ನಿರತರಾಗಿದ್ದಾಗ ಸದರಿ ಸ್ಥಳದಲ್ಲಿ ಐದು ಜನರ ಗುಂಪು ನಿಂತು ಮಾತನಾಡುತ್ತಿದ್ದು, ಅದರಲ್ಲಿ ಇಬ್ಬರು ವ್ಯಕ್ತಿಗಳ ಕೈಯಲ್ಲಿ ಸೂಟ್ ಕೇಸ್ ಹಿಡಿದು ಕೊಂಡಿರುವುದು ಕಂಡುಬಂದಿರುತ್ತದೆ. ಅನುಮಾನಸ್ಪದವಾಗಿ ಕಂಡ ಇಬ್ಬರು ಆಸಾಮಿಗಳನ್ನು ತಡೆದು ನಿಲ್ಲಿಸಿ ಅಜಮಾಯಿಸಿ ನೋಡಲಾಗಿ, ಒಂದು ಕೆಂಪು ಬಣ್ಣದ ಸೂಟ್ ಕೇಸ್‌ನಲ್ಲಿ ಸುಮಾರು 06 ಕೆ.ಜಿಯಷ್ಟು ಶ್ರೀಗಂಧದ ಸಣ್ಣ ತುಂಡುಗಳು ಹಾಗೂ ಮತ್ತೊಂದು ಸೂಟ್ ಕೇಸ್‌ನಲ್ಲಿ 09 ಕೆ.ಜಿಯಷ್ಟು ಶ್ರೀಗಂಧದ ಸಣ್ಣ ತುಂಡುಗಳಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಆಸಾಮಿಗಳನ್ನು ವಿಚಾರಿಸಲಾಗಿ, ಆಸಾಮಿಗಳಲ್ಲಿ ಒಬ್ಬ ಓಡಿ ಹೋಗಿರುತ್ತಾನೆ. ಸ್ಥಳದಲ್ಲಿದ್ದ ಮತ್ತೊಬ್ಬ ಆಸಾಮಿಯನ್ನು ವಿಚಾರಿಸಿದಾಗ ಅಂಕಯ್ಯ ಬಿನ್ ಬಾಲಯ್ಯ, ವಯಸ್ಸು 25 ವರ್ಷ, ಆಂಜನೇಯಪುರಂ ಗ್ರಾಮ, ಕಡಪ ಜಿಲ್ಲೆ, ಆಂಧ್ರಪ್ರದೇಶದ ವಾಸಿಯಾಗಿದ್ದು, ಆಂಧ್ರಪ್ರದೇಶದ ಕಡಪದಿಂದ ಖಾಸಗಿ ಬಸ್ಸಿನ ಮೂಲಕ ಬೆಂಗಳೂರಿಗೆ ಬಂದಿಳಿದು ಅಲ್ಲಿಂದ ಕಟ್ಟಿಗೇನಹಳ್ಳಿಗೆ ಶ್ರೀಗಂಧವನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾನೆ. ನಂತರ ಶ್ರೀಗಂಧವನ್ನು ಸಾಗಿಸಲು ಇಲಾಖೆಯ ರಹದಾರಿಯನ್ನು ಕೇಳಲಾಗಿ, ಆಸಾಮಿಯ ಬಳಿ ಯಾವುದೇ ಸೂಕ್ತ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಆರೋಪಿಯನ್ನು ಹಾಗೂ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಬಂಧಿಸಲಾದ ಆರೋಪಿಯನ್ನು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ ಗ್ರಾಮಾಂತರ ಜಿಲ್ಲೆ ರಲ್ಲಿ ಹಾಜರುಪಡಿಸಿ ನಂತರ ಆರೋಪಿಯನ್ನು ನ್ಯಾಯಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಎರಡು ಸೂಟ್‌ಕೇಸ್‌ಗಳಲ್ಲಿದ್ದ ಒಟ್ಟು 15 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 15 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಶಿವಣ್ಣ ಬಿನ್ ಲೇಟ್.ಕೆ.ಮಾದಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ) ಇವರ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:15-06-2002ರಂದು ಪಡೆದಿರುತ್ತಾರೆ. ಶ್ರೀ.ಎಂ.ಮಹದೇವಯ್ಯ ಬಿನ್ ಲೇಟ್ ಶ್ರೀ.ಟಿ.ಎಂ.ಮಲ್ಲಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ) ಹಾಗೂ ಶ್ರೀ.ಎನ್.ಜಿ.ಸತ್ಯನಾರಾಯಣ ಬಿನ್ ಶ್ರೀ.ಲೇಟ್.ಗಂಗಪ್ಪ, ವಲಯ ಅರಣ್ಯಾಧಿಕಾರಿ(ಅಂದಿನ ವನಪಾಲಕ) ಇವರುಗಳ ಮುಖ್ಯ ವಿಚಾರಣೆಯನ್ನು ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ: 16-09-2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 15 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳನ್ನು ಸಾಗಣೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:04–07–1993ರಂದು ಹೊಸಕೋಟೆ ತಾಲ್ಲೂಕು, ಮಾಲೂರು ರಸ್ತೆಯಲ್ಲಿರುವ ಕಟ್ಟಿಗೇನಹಳ್ಳಿ ಕ್ರಾಸ್ ಬಳಿ ಸೂಟ್‌ಕೇಸ್‌ಗಳಲ್ಲಿ ಅಕ್ರಮವಾಗಿ ಒಟ್ಟು 15 ಕೆ.ಜಿ ಶ್ರೀಗಂಧವನ್ನು ಹೊಂದಿರುವುದು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 15 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 15 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:102/1993–94ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 15 ಕೆ.ಜಿ ಶ್ರೀಗಂಧದ ಸಣ್ಣ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:31–01–2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:122/1994–95 ದಿನಾಂಕ:16/07/1994.

ಸಂಖ್ಯೆ: ಎ1.ಎಫ್.ಓ.ಸಿ:122/1994–95 ದಿನಾಂಕ:31/01/2012

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು..
ಅರ್ಜಿದಾರರು ಆರೋಪಿಗಳು	:	1–ಲಕ್ಷ್ಮಣ ಬಿನ್ ಗುರುವಯ್ಯ, ಪ್ರಗತಿಪುರ,ಬೆಂಗಳೂರು (ಬಂಧಿಸಿದೆ).
		2–ಗುಂಡ ಬಿನ್ ಪಾಪೇಗೌಡ, ಪ್ರಗತಿಪುರ, ಬೆಂಗಳೂರು (ತಲೆಮರೆಸಿಕೊಂಡಿರುತ್ತಾರೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:15–07–1994ರಂದು ರಾತ್ರಿ ಬೆಂಗಳೂರು ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ದೊರೆಸಾನಿಪಾಳ್ಯ ಅರಣ್ಯ ಸಂಶೋಧನಾ ಕೇಂದ್ರದ ನರ್ಸರಿಯ ಬಿದಿರು ಪ್ಲಾಟ್‌ನಲ್ಲಿ ಎರಡು ಶ್ರೀಗಂಧದ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಿ ಕೊಂಬೆಗಳನ್ನು ಅಲ್ಲಿಯೇ ಬಿಟ್ಟು ಕಾಂಡಗಳನ್ನು ತೆಗೆದುಕೊಂಡು ಹೋಗಿರುವ ಬಗ್ಗೆ ಮಾಹಿತಿ ಬಂದ ಕೂಡಲೇ ಬೆಂಗಳೂರು ಸಂಶೋಧನಾ ವಲಯದ ಸಿಬ್ಬಂದಿ ಹಾಗೂ

ಅರಣ್ಯ ಸಂಚಾರಿ ದಳದ ಸಿಬ್ಬಂದಿ ಸದರಿ ಪ್ರದೇಶದಲ್ಲಿ ಗಸ್ತು ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಸಂಶೋಧನಾ ಕೇಂದ್ರದ ಪಕ್ಕದಲ್ಲಿರುವ ಶ್ರೀ.ತೋಂಟೇಗೌಡ ಎಂಬುವವರಿಗೆ ಸೇರಿದ ಜಮೀನಿನಲ್ಲಿ ಯಾರೋ ಆಸಾಮಿಗಳು ಮರ ಕತ್ತರಿಸುವ ಶಬ್ದವನ್ನು ಹಿಂಬಾಲಿಸಿ ನೋಡಲಾಗಿ, ಇಬ್ಬರು ಆಸಾಮಿಗಳು ಕೊಡಲಿಯಿಂದ ಮರಗಳನ್ನು ಕಡಿಯುತ್ತಿರುವುದು ಕಂಡುಬಂದಿರುತ್ತದೆ. ತಕ್ಷಣ ಸಿಬ್ಬಂದಿಗಳು ಅವರನ್ನು ಹಿಡಿಯಲು ಪ್ರಯತ್ನಿಸಲಾಗಿ, ಆಸಾಮಿಗಳು ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಲು ಯತ್ನಿಸಿರುತ್ತಾರೆ. ಇಲಾಖಾ ಸಿಬ್ಬಂದಿಗಳು ಗಾಳಿಯಲ್ಲಿ ಗುಂಡು ಹಾರಿಸಿದಾಗ ಆಸಾಮಿಗಳಲ್ಲಿ ಒಬ್ಬ ಆಸಾಮಿ ಪರಾರಿಯಾಗಿರುತ್ತಾನೆ. ಇನ್ನೊಬ್ಬ ಆಸಾಮಿಯನ್ನು ಹಿಡಿದು ವಿಚಾರಿಸಲಾಗಿ, ಲಕ್ಷ್ಮಣ ಬಿನ್ ಗುರುವಯ್ಯ, ವಯಸ್ಸು 28 ವರ್ಷ, ಬನಶಂಕರಿಯ ಪಕ್ಕದಲ್ಲಿರುವ 5ನೇ ಕ್ರಾಸ್, ಪ್ರಗತಿಪುರ ವಾಸಿ ಎಂದು ಹಾಗೂ ತಪ್ಪಿಸಿಕೊಂಡ ಆಸಾಮಿಯ ಹೆಸರು ಗುಂಡ ಬಿನ್ ಪಾಪಾಗೌಡ, ತನ್ನ ಮನೆಯ ಎದುರು ಮನೆಯ ವಾಸಿ ಎಂದು ತಿಳಿಸಿರುತ್ತಾನೆ. ನಂತರ ಅಕ್ರಮವಾಗಿ ಕಡಿತಲೆ ಮಾಡಿ ಸಾಗಿಸುತ್ತಿದ್ದ ಮರದ ತುಂಡುಗಳನ್ನು ಪರಿಶೀಲಿಸಲಾಗಿ, ಒಟ್ಟು 08 ಶ್ರೀಗಂಧದ ಮರದ ತುಂಡುಗಳಾಗಿರುತ್ತವೆ. ಈ ರೀತಿ ಕಡಿತಲೆ ಮಾಡಲು ಇಲಾಖಾ ಅನುಮತಿ ಪಡೆಯಲಾಗಿದೆಯೇ ಎಂದು ವಿಚಾರಿಸಲಾಗಿ, ಆಸಾಮಿಯ ಬಳಿ ಯಾವುದೇ ಅನುಮತಿ ಪತ್ರ ಇರುವುದಿಲ್ಲ. ಈ ಹಿಂದೆಯೂ ಸಹ ಸದರಿ ಪ್ರದೇಶದಿಂದ ಶ್ರೀಗಂಧದ ಮರಗಳ ಕಳ್ಳತನವನ್ನು ಮಾಡಿರುವುದಾಗಿ ಆಸಾಮಿ ಒಪ್ಪಿಕೊಂಡಿರುತ್ತಾನೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಉಲ್ಲಂಘಿಸಿರುವ ಕಾರಣ, ಒಬ್ಬ ಆರೋಪಿಯನ್ನು ಬಂಧಿಸಿ ಒಟ್ಟು 08 ಶ್ರೀಗಂಧದ ತುಂಡುಗಳನ್ನು ಪಂಚನಾಮೆ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ.

2. ಬಂಧಿಸಲಾದ ಆರೋಪಿಯನ್ನು ಮಾನ್ಯ 2ನೇ ಎ.ಸಿ.ಎಂ.ಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಂತರ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 08 ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

3. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸರ್ಕಾರಿ ಜಾಗದಲ್ಲಿ ಕಡಿದು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84, 86, 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 08 ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

4. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎಸ್.ಶಿವರಾಜು ಬಿನ್ ಶಿವಣ್ಣ, ಅರಣ್ಯ ರಕ್ಷಕ (ಅಂದಿನ ಅರಣ್ಯ ವೀಕ್ಷಕ) ಹಾಗೂ ಶ್ರೀ.ಎಸ್.ಕೆ.ರವಿ ಬಿನ್ ಸುಂದರ್ ರಾವ್, ದಿನಗೂಲಿ ನೌಕರ ಇವರುಗಳ ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:20-01-2012ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ಅಕ್ರಮವಾಗಿ ಶ್ರೀಗಂಧದ ಮರಗಳನ್ನು ಕಡಿತಲೆ ಮಾಡಿ ಒಟ್ಟು 08 ಶ್ರೀಗಂಧದ ತುಂಡುಗಳನ್ನು ಸಾಗಣೆ ಮಾಡಲು ಯತ್ನಿಸಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಆರೋಪಿಗಳು ಗೈರು ಹಾಜರು ಇರುವುದರಿಂದ ಪಾಟಿ ಸವಾಲು ಮಾಡಿರುವುದಿಲ್ಲ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 08 ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ಕಡಿದು ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84, 86, 87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 08 ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:15-07-1994ರಂದು ರಾತ್ರಿ ಬೆಂಗಳೂರು ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ದೊರೆಸಾನಿಪಾಳ್ಯ ಅರಣ್ಯ ಸಂಶೋಧನಾ ಕೇಂದ್ರದ ನರ್ಸರಿಯ ಬಿದಿರು ಪ್ಲಾಟ್‌ನಲ್ಲಿ ಎರಡು ಶ್ರೀಗಂಧದ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಿ ನಂತರ ಸಂಶೋಧನಾ ಕೇಂದ್ರದ ಪಕ್ಕದಲ್ಲಿರುವ ಶ್ರೀ.ಹೊಂಬೇಗೌಡ ಎಂಬುವವರಿಗೆ ಸೇರಿದ ಜಮೀನಿನಲ್ಲಿ ಶ್ರೀಗಂಧದ ಮರಗಳನ್ನು ಕಡಿದು ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 86, 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧದವನ್ನು ಅಕ್ರಮವಾಗಿ ಕಡಿದು ಸಾಗಣೆ ಮಾಡಲು ಯತ್ನಿಸಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಕಡಿದಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 08 ಶ್ರೀಗಂಧದ ತುಂಡುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರದ ಸ್ವತ್ತಾದ 08 ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:122/1994-95ರಲ್ಲಿ ಅಮಾನತ್ತು-ಪಡಿಸಿಕೊಂಡಿರುವ ಒಟ್ಟು 08 ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:31-01-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:155/1994-95 ದಿನಾಂಕ:17/08/1994.

ಸಂಖ್ಯೆಃಎ1.ಅಅಪ್ರ.71A.155/94-95 ದಿನಾಂಕಃ31/01/2012.

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	1-ಬೈಲಪ್ಪ ಬಿನ್ ಬೈರಪ್ಪ, ಹೊಸೂರು. (ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ). 2-ಬಸಪ್ಪ, ತನುರಗೊಂಡ್ಲನಹಳ್ಳಿ. 3-ಗಣೇಶ್, ತನುರಗೊಂಡ್ಲನಹಳ್ಳಿ. 4-ತಿಮ್ಮಪ್ಪ, ತನುರಗೊಂಡ್ಲನಹಳ್ಳಿ. 5-ಸಾಕಪ್ಪ, ತನುರಗೊಂಡ್ಲನಹಳ್ಳಿ. (ತಲೆಮರೆಸಿಕೊಂಡಿರುತ್ತಾರೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:17-08-1994ರಂದು ಬೆಳಿಗ್ಗೆ 8.00ರ ಸಮಯದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಇರುವ ಸಾವನ್ ದರ್ಬಾರ್ ಆಶ್ರಮದಿಂದ ದೂರವಾಣಿ ಮುಖೇನ ತಿಳಿಸಿದ ಖಚಿತ ವರ್ತಮಾನದ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಕೆಂಗೇರಿ

ಗ್ರಾಮದ ಹೋಬಳಿಯ ವ್ಯಾಪ್ತಿಗೆ ಸೇರುವ ಸಾವನ್ ದರ್ಬಾರ್ ಆಶ್ರಮದ ಪ್ರದೇಶದಲ್ಲಿ ತಪಾಸಣೆ ಮಾಡುತ್ತಿದ್ದಾಗ ಅಕ್ರಮವಾಗಿ ಶ್ರೀಗಂಧದ ಮರಗಳನ್ನು ಕಡಿದು ಶೇಖರಿಸುತ್ತಿದ್ದ ಆಸಾಮಿ ಕಂಡುಬಂದಿರುತ್ತದೆ. ಆಸಾಮಿಯನ್ನು ಹಿಡಿದು ಸದರಿ ಆಶ್ರಮದ ಪ್ರದೇಶದಲ್ಲಿ ಶ್ರೀಗಂಧದ ಮರಗಳನ್ನು ಕಡಿದು ಸಂಗ್ರಹಣೆ ಮಾಡಿರುವ ಬಗ್ಗೆ ಇಲಾಖೆಯ ಪರವಾನಿಗೆಯನ್ನು ಕೇಳಲಾಗಿ, ಶ್ರೀಗಂಧದ ಮರಗಳನ್ನು ಆಶ್ರಮದ ಪ್ರದೇಶದಲ್ಲಿ ಕಡಿಯಲು ತನ್ನ ಬಳಿ ಯಾವುದೇ ಅರಣ್ಯ ಇಲಾಖೆಯ ಅನುಮತಿ ಅಥವಾ ರಹದಾರಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ಆರೋಪಿಯ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ, ತಮಿಳುನಾಡು ರಾಜ್ಯ, ಹೊಸೂರು ತಾಲ್ಲೂಕಿನ ಗೊಂಡ್ಲನಹಳ್ಳಿ ಗ್ರಾಮದ ವಾಸಿಯಾದಂತಹ ಬೈರಪ್ಪ ಉರುಫ್ ಬೈಯಪ್ಪ ಬಿನ್ ಕುಳ್ಳಪ್ಪ ಎಂಬುದಾಗಿ ತಿಳಿಸಿರುತ್ತಾನೆ. ಶ್ರೀಗಂಧವನ್ನು ಎಲ್ಲಿಗೆ ಸಾಗಿಸುತ್ತಿರುವೆ ಎಂದು ವಿಚಾರಿಸಲಾಗಿ, ತನ್ನದೇ ಊರಿನವರಾದ ರಾಮಯ್ಯ ಬಿನ್ ಸಾಕಪ್ಪ ಎಂಬುವವರಿಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ಹೇಳಿರುತ್ತಾನೆ. ಸದರಿ ಮರಗಳನ್ನು ಕಡಿಯಲು ಒಟ್ಟು ನಾಲ್ಕು ಜನರು ತನ್ನ ಜೊತೆಗೆ ಬಂದಿದ್ದು, ಅವರ ಹೆಸರು 1) ಬಸಪ್ಪ, 2) ಗಣೇಶ, 3) ತಿಮ್ಮಪ್ಪ, ಹಾಗೂ 4) ಸಾಕಪ್ಪ ಎಂದು ತಿಳಿಸಿರುತ್ತಾನೆ. ಅಕ್ರಮವಾಗಿ ಕಡಿದು ಸಂಗ್ರಹಿಸಿಟ್ಟಿದ್ದ ಶ್ರೀಗಂಧವನ್ನು ತೂಕ ಮಾಡಲಾಗಿ, ಏಳು ತುಂಡುಗಳಿದ್ದು, ಅವುಗಳ ಒಟ್ಟು ತೂಕ 40 ಕೆ.ಜಿ ಇರುತ್ತದೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969 ಉಲ್ಲಂಘಿಸಿರುವ ಕಾರಣ, ಬೈರಪ್ಪ ಉರುಫ್ ಬೈಯಪ್ಪ ಬಿನ್ ಕುಳ್ಳಪ್ಪ ಈತನನ್ನು ಬಂಧಿಸಿ ಒಟ್ಟು 40 ಕೆ.ಜಿ ಶ್ರೀಗಂಧದ ತುಂಡುಗಳನ್ನು ಪಂಚನಾಮೆ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ.

2. ಬಂಧಿಸಲಾದ ಆರೋಪಿಯನ್ನು ಮಾನ್ಯ 3ನೇ ಎ.ಸಿ.ಎಂ.ಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಂತರ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 40 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

3. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84, 86, 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 40 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

4. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಪರಮಶಿವಯ್ಯ ಬಿನ್ ಆರ್.ಹೆಚ್.ರುದ್ರಪ್ಪ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಹೆಚ್.ಕೆ.ಮರೀಸ್ವಾಮಿ ಬಿನ್ ಲೇಟ್.ಟಿ.ಕಾಳಜವರಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ) ಹಾಗೂ ಶ್ರೀ.ಟಿ.ಕೆ.ಮುನಿರಾಜು ಬಿನ್ ಲೇಟ್.ಕೆಂಪಣ್ಣ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

5. ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಡಿ.ಸಿ.ನಾರಾಯಣಮೂರ್ತಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ.ಎಂ.ಪುಟ್ಟಸ್ವಾಮಿ, ವಲಯ ಅರಣ್ಯಾಧಿಕಾರಿ ಹಾಗೂ ಶ್ರೀ.ಎಂ.ರಾಮಚಂದ್ರ, ಅರಣ್ಯ ರಕ್ಷಕ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ಒಟ್ಟು 40 ಕೆ.ಜಿ ಶ್ರೀಗಂಧದವನ್ನು ಅಕ್ರಮವಾಗಿ ಸಂಗ್ರಹಿಸಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

6. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

7(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 40 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ಕಡಿದು ಸಂಗ್ರಹಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84, 86, 87 ರ ಉಲ್ಲಂಘನೆಯಾಗಿದೆಯೇ?

7(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 40 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

7(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

7(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

7(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

8. ದಿನಾಂಕ:17-08-1994ರಂದು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಇರುವ ಸಾವನ್ ದರ್ಬಾರ್ ಆಶ್ರಮದ ಆವರಣದಲ್ಲಿ ಅಕ್ರಮವಾಗಿ ಶ್ರೀಗಂಧದ ಮರಗಳನ್ನು ಕಡಿದು ಸಂಗ್ರಹಣೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಂಗ್ರಹಿಸಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 40 ಕೆ.ಜಿ ಶ್ರೀಗಂಧದ ತುಂಡುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

9. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 40 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:155/1994-95ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 40 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:31-01-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:222/1993-94 ದಿನಾಂಕ: 24/09/1993.

ಸಂಖ್ಯೆ:ಎ1.ಅಅಪ.71A.222/93-94 ದಿನಾಂಕ:02/03/2012.

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	1-ಮುರುಗನ್ ಬಿನ್ ಪೆರುಮಾಳ್ ಸಿಂಗಾರಪೇಟೆ, ಧರ್ಮಪುರಿ. 2-ಚಿನ್ನತಂಬಿ ಬಿನ್ ಮುತ್ತು @ ಕುಂಜ, ಅನಂದವಾಡಿ, ತಿರುವಣ್ಣಾಮಲ್ಲೆ, ತಮಿಳುನಾಡು.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:24-09-1993ರಂದು ಸಾಯಂಕಾಲ 4.00 ಗಂಟೆ ಸಮಯದಲ್ಲಿ ಬೆಂಗಳೂರು ನಗರದ ಹೊಸೂರು ರಸ್ತೆಯಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ತಪಾಸಣಾ ಕಾರ್ಯದಲ್ಲಿ ನಿರತರಾಗಿದ್ದಾಗ ಹೊಸೂರು ಕಡೆಯಿಂದ ಇಬ್ಬರು ಆಸಾಮಿಗಳು ಚೀಲಗಳನ್ನು ಹಿಡಿದುಕೊಂಡು ಬರುತ್ತಿರುವುದನ್ನು ಗಮನಿಸಿದ ಸಿಬ್ಬಂದಿಗಳು, ಆಸಾಮಿಗಳನ್ನು ತಡೆದು ಅವರ ಬಳಿ ಇದ್ದ ಚೀಲಗಳನ್ನು ಪರಿಶೀಲಿಸಿದಾಗ ಸದರಿ ಚೀಲಗಳಲ್ಲಿ

ಶ್ರೀಗಂಧದ ತುಂಡುಗಳು ಇರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಆಸಾಮಿಗಳನ್ನು ವಿಚಾರಿಸಲಾಗಿ, ಒಂದನೇ ಆಸಾಮಿಯ ಹೆಸರು ಮುರುಗನ್ ಬಿನ್ ಪೆರುಮಾಳ್, ಸಿಂಗಾರಪೇಟೆ, ಧರ್ಮಪುರಿ ಜಿಲ್ಲೆ, ತಮಿಳುನಾಡು ಎಂದು ಹಾಗೂ ಎರಡನೇ ಆಸಾಮಿಯ ಹೆಸರು ಚಿನ್ನತಂಬಿ ಬಿನ್ ಮುತ್ತು @ ಕುಂಜ, ಅನಂದವಾಡಿ, ತಿರುವಣ್ಣಮಲ್ಲೈ, ತಮಿಳುನಾಡು ಎಂದು ತಿಳಿಸಿರುತ್ತಾರೆ. ಸದರಿ ಶ್ರೀಗಂಧವನ್ನು ತಮಿಳುನಾಡು ರಾಜ್ಯದ ಆನಂದವಾಡಿ ಮಲೈ ಅರಣ್ಯ ಪ್ರದೇಶದಿಂದ ಕಡಿದು ಆನೇಕಲ್ ತಾಲ್ಲೂಕು, ಅತ್ತಿಬೆಲೆ ಗ್ರಾಮದ ಕಲ್ಲಪಳ್ಳಿಯಲ್ಲಿ ಮಾರಾಟ ಮಾಡಲು ತೆರಳುತ್ತಿರುವುದಾಗಿ ಹೇಳಿಕೆ ನೀಡಿರುತ್ತಾರೆ. ನಂತರ ಶ್ರೀಗಂಧವನ್ನು ಸಾಗಿಸಲು ಇಲಾಖೆಯ ರಹದಾರಿಯನ್ನು ಕೇಳಲಾಗಿ, ಆಸಾಮಿಗಳ ಬಳಿ ಯಾವುದೇ ಸೂಕ್ತ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾರೆ. ಆಸಾಮಿಗಳ ಬಳಿ ಇದ್ದ ಶ್ರೀಗಂಧವನ್ನು ತೂಕ ಮಾಡಲಾಗಿ, ಒಟ್ಟು 10 ಕೆ.ಜಿ ಇರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಇಬ್ಬರು ಆರೋಪಿಯನ್ನು ಹಾಗೂ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಬಂಧಿಸಲಾದ ಆರೋಪಿಗಳನ್ನು ಗೌರವಾನ್ವಿತ ಜೆ.ಎಂ.ಎಫ್.ಸಿ ನ್ಯಾಯಾಲಯ, ಆನೇಕಲ್ ತಾಲ್ಲೂಕು ರವರ ಸಮಕ್ಷಮ ಹಾಜರುಪಡಿಸಿ, ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 10 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎಲ್.ಟಿ.ಜವರಾಯಿಗೌಡ ಬಿನ್ ಲೇಟ್.ತಿಮ್ಮೇಗೌಡ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ಹೆಚ್.ಕೆ.ಮರಿಸ್ವಾಮಿ ಬಿನ್ ಲೇಟ್.ಟಿ.ಕಾಳಜವರಯ್ಯ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಕೆ.ಆರ್.ಶೇಖರ್ ಬಿನ್ ಕೆ.ಪಿ.ರಾಮಲಿಂಗಮ್, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸಾಗಣೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:24-09-1993ರಂದು ಬೆಂಗಳೂರು ನಗರದ ಹೊಸೂರು ರಸ್ತೆಯಲ್ಲಿ ಇಬ್ಬರು ಆಸಾಮಿಗಳು ಅಕ್ರಮವಾಗಿ 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಚೀಲಗಳಲ್ಲಿ ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ

ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಗಳು ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 10 ಕೆ.ಜಿ ಶ್ರೀಗಂಧದ ತುಂಡುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:222/1993-94ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 10 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:02-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 206/1994-95 ದಿನಾಂಕ:25/10/1994.

ಸಂಖ್ಯೆಃಎ1.ಅಅಪ್ರ.71A.206/94-95 ದಿನಾಂಕಃ02/03/2012.

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಸುರೇಶ್ ಬಿನ್ ಕೃಷ್ಣೇಗೌಡ, ಬಡವನದಿಣ್ಣೆ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:25-10-1994ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಬೆಂಗಳೂರಿನ ಕಿನೋ ಟಾಕಿಸ್ ಬಳಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ತಪಾಸಣಾ ಕಾರ್ಯದಲ್ಲಿ ನಿರತರಾಗಿದ್ದಾಗ ಖಚಿತ ವರ್ತಮಾನ ಮೇರೆಗೆ ಕಿನೋ ಟಾಕಿಸ್ ಬಳಿ ಸೂಟ್‌ಕೇಸನ್ನು ಹೊತ್ತುಕೊಂಡು ಅನುಮಾನಸ್ಪದವಾಗಿ ಹೋಗುತ್ತಿದ್ದ ಒಬ್ಬ ಆಸಾಮಿಯನ್ನು ತಡೆದು ನಿಲ್ಲಿಸಿ, ಸದರಿ ಸೂಟ್‌ಕೇಸನ್ನು ತೆಗೆಯಿಸಿ ನೋಡಲಾಗಿ, ಅದರಲ್ಲಿ ಶ್ರೀಗಂಧದ ತುಂಡು ಹಾಗೂ ಬೇರುಗಳಿರುತ್ತದೆ. ಈ ಬಗ್ಗೆ ಆಸಾಮಿಯನ್ನು ವಿಚಾರಿಸಲಾಗಿ, ಆಸಾಮಿಯ ಹೆಸರು ಸುರೇಶ್ ಬಿನ್ ಕೃಷ್ಣೇಗೌಡ, ಬಡವನದಿಣ್ಣೆ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಎಂದು ಹಾಗೂ ಸದರಿ ಶ್ರೀಗಂಧವನ್ನು ಮೂಡಿಗೆರೆ ತಾಲ್ಲೂಕಿನ ಸಮೀಪದ ಹಳ್ಳಿಗಳಿಂದ ಕಡಿದು ತಂದಿರುವುದಾಗಿ ತಿಳಿಸಿರುತ್ತಾನೆ. ನಂತರ ಶ್ರೀಗಂಧವನ್ನು ಸಾಗಿಸಲು ಇಲಾಖೆಯ ರಹದಾರಿಯನ್ನು ಕೇಳಲಾಗಿ, ಆಸಾಮಿಯ ಬಳಿ ಯಾವುದೇ ಸೂಕ್ತ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ. ಶ್ರೀಗಂಧವನ್ನು ತೂಕ ಮಾಡಲಾಗಿ, ಒಟ್ಟು 15 ಕೆ.ಜಿ ಇರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಆರೋಪಿಯನ್ನು ಹಾಗೂ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಬಂಧಿಸಲಾದ ಆರೋಪಿಯನ್ನು ಮಾನ್ಯ 8ನೇ ಎ.ಸಿ.ಎಂ.ಎಂ ನ್ಯಾಯಾಲಯ, ಬೆಂಗಳೂರು ನಗರ ರವರ ಸಮಕ್ಷಮ ಹಾಜರುಪಡಿಸಿ ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 15 ಕೆ.ಜಿ ಶ್ರೀಗಂಧವನ್ನು

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 15 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎಂ.ಪುಟ್ಟಸ್ವಾಮಿ ಬಿನ್ ಮಾದೇಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಕೆ.ವಿ.ಶ್ರೀನಿವಾಸಮೂರ್ತಿ ಬಿನ್ ಲೇಟ್.ಕೆ.ವೇಣುಗೋಪಾಲ್, ವಲಯ ಅರಣ್ಯಾಧಿಕಾರಿ, ಶ್ರೀ.ಟಿ.ಕೆ.ಮುನಿರಾಜು ಬಿನ್ ಲೇಟ್.ಕೆಂಪಣ್ಣ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಲಕ್ಷ್ಮಿನರಸಿಂಹಯ್ಯ ಬಿನ್ ಉಗ್ರಯ್ಯ, ಅರಣ್ಯ ರಕ್ಷಕ ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 15 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಬೇರುಗಳನ್ನು ಸಾಗಣೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಬೇರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:25–10–1994ರಂದು ಬೆಂಗಳೂರಿನ ಕಿನೋ ಟಾಕಿಸ್ ಬಳಿ ಸೂಟ್‌ಕೇಸ್‌ನಲ್ಲಿ ಅಕ್ರಮವಾಗಿ 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಬೇರುಗಳನ್ನು ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಬೇರುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಬೇರುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:206/1994-95ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಬೇರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:02-03-2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಪಿ.ಆರ್. 762

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 207/1994-95 ದಿನಾಂಕ:25/10/1994.

ಸಂಖ್ಯೆ:ಎ1.ಅಅಪ.71A.207/94-95 ದಿನಾಂಕ:02/03/2012.

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	ಶಣ್ಮುಗ ಬಿನ್ ಮಂಜೇಗೌಡ, ಹಾಡುವಳ್ಳಿ ಗ್ರಾಮ, ಹಾಸನ ಜಿಲ್ಲೆ.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:25-10-1994ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ದೂರವಾಣಿ ಮೂಲಕ ಬಂದ ಖಚಿತ ವರ್ತಮಾನ ಮೇರೆಗೆ ಬೆಂಗಳೂರು ನಗರ, ಶೇಷಾದ್ರಿಪುರಂನ ರೆಸಲ್ದಾರ್ ರಸ್ತೆಯ ಬಳಿಯಿರುವ ಶ್ರೀ.ಪ್ಯಾರೇಜಾನ್ ಎಂಬುವವರ ನಿವಾಸದ ಮೇಲೆ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ದಾಳಿ ಮಾಡಲಾಗಿ, ಸದರಿ ಮನೆಯಲ್ಲಿ ಒಬ್ಬ ಆಸಾಮಿ ಶ್ರೀಗಂಧದ ತುಂಡು ಹಾಗೂ ಸಣ್ಣ ಚಕ್ಕೆಗಳನ್ನು ಶೇಖರಿಸುತ್ತಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಆಸಾಮಿಯನ್ನು ವಿಚಾರಿಸಲಾಗಿ, ಆಸಾಮಿಯ ಹೆಸರು ಶಣ್ಮುಗ ಬಿನ್ ಮಂಜೇಗೌಡ, ಹಾಡುವಳ್ಳಿ ಗ್ರಾಮ, ಹಾಸನ ಜಿಲ್ಲೆ ಎಂದು ಹಾಗೂ ಸದರಿ ಶ್ರೀಗಂಧದ ತುಂಡು ಹಾಗೂ ಚಕ್ಕೆಗಳನ್ನು ಹಾಸನ ಜಿಲ್ಲೆಯಿಂದ ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ಶ್ರೀ.ಪ್ಯಾರೇಜಾನ್ ಇವರಿಗೆ ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿರುತ್ತಾನೆ. ನಂತರ ಶ್ರೀಗಂಧವನ್ನು ಸಾಗಿಸಲು ಇಲಾಖೆಯ ರಹದಾರಿಯನ್ನು ಕೇಳಲಾಗಿ, ಆಸಾಮಿಯ ಬಳಿ ಯಾವುದೇ ಸೂಕ್ತ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ. ಶ್ರೀಗಂಧವನ್ನು ತೂಕ ಮಾಡಲಾಗಿ, ಒಟ್ಟು 15 ಕೆ.ಜಿ ಇರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಆರೋಪಿಯನ್ನು ಹಾಗೂ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಬಂಧಿಸಲಾದ ಆರೋಪಿಯನ್ನು ಮಾನ್ಯ 8ನೇ ಎ.ಸಿ.ಎಂ.ಎಂ ನ್ಯಾಯಾಲಯ, ಬೆಂಗಳೂರು ನಗರ ರವರ ಸಮಕ್ಷಮ ಹಾಜರುಪಡಿಸಿ ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 15 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

2. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಹೊಂದಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 15 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

3. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎಂ.ಪುಟ್ಟಸ್ವಾಮಿ ಬಿನ್ ಮಾದೇಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಕೆ.ಪಿ.ಶ್ರೀನಿವಾಸಮೂರ್ತಿ ಬಿನ್ ಲೇಟ್.ಕೆ.ವೇಣುಗೋಪಾಲ್, ವಲಯ ಅರಣ್ಯಾಧಿಕಾರಿ, ಶ್ರೀ.ಟಿ.ಕೆ.ಮುನಿರಾಜು ಬಿನ್ ಲೇಟ್.ಕೆಂಪಣ್ಣ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಲಕ್ಷ್ಮೀನರಸಿಂಹಯ್ಯ ಬಿನ್ ಉಗ್ರಯ್ಯ, ಅರಣ್ಯ ರಕ್ಷಕ ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಡೆದಿರುತ್ತಾರೆ.

4. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 15 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಾಗದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15 ಕೆ.ಜಿ ಶ್ರೀಗಂಧವನ್ನು ಹೊಂದಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 15 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:25–10–1994ರಂದು ಬೆಂಗಳೂರು ನಗರ, ಶೇಷಾದ್ರಿಪುರಂನ ರಿಸಲ್ದಾರ್ ರಸ್ತೆಯ ಬಳಿಯಿರುವ ಶ್ರೀ.ಪ್ಯಾರೇಜಾನ್ ಎಂಬುವವರ ನಿವಾಸವಲ್ಲಿ ಅಕ್ರಮವಾಗಿ ಶ್ರೀಗಂಧದ ತುಂಡು ಹಾಗೂ ಸಣ್ಣ ಚಕ್ಕೆಗಳನ್ನು ಹೊಂದಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 15 ಕೆ.ಜಿ ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

8. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 15 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:207/1994–95ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 15 ಕೆ.ಜಿ ಶ್ರೀಗಂಧದ ತುಂಡು ಹಾಗೂ ಸಣ್ಣ ಚಕ್ಕೆಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:02–03–2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ:250/1996-97 ದಿನಾಂಕ:09/01/1997.

ಸಂಖ್ಯೆ:ಎ1.ಅಅಪ.71A.250/96-97 ದಿನಾಂಕ:21/02/2012.

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	1-ರತ್ನಮ್ಮ ಕೋಂ.ಶಿವಲಿಂಗಮ್, ತಮಿಳುನಾಡು. 2-ಎಸ್.ಮಹರಾಜನ್ ಬಿನ್ ಶಿವಲಿಂಗಮ್, ತಮಿಳುನಾಡು.

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:09-01-1997ರಂದು ಬೆಳಗಿನ ಜಾವ 6.00 ಗಂಟೆಯ ಸಮಯದಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರು ನಗರದ ಮಲ್ಲೇಶ್ವರಂ 1ನೇ ಕ್ರಾಸ್, ಸಂಪಿಗೆ ರಸ್ತೆಯಲ್ಲಿ ಗಸ್ತಿನಲ್ಲಿದ್ದಾಗ ಅನುಮಾನಸ್ಪದವಾಗಿ ಒಬ್ಬ ಮಹಿಳೆ ಮತ್ತು ಒಬ್ಬ ಗಂಡು ಹುಡುಗ ನೈಲಾನ್ ಕೈಚೀಲ ಮತ್ತು ಜಿಪ್ ಇರುವ ಬಟ್ಟೆಯ ಕೈಚೀಲದಲ್ಲಿ ಮರದ ತುಂಡುಗಳನ್ನು ತುಂಬಿ ಅದರ ಮೇಲೆ ಕೆಂಪು ಮತ್ತು ಬಿಳಿಯ ಬಟ್ಟೆಯನ್ನು ಹೊದಿಸಿ ತೆಗೆದುಕೊಂಡು ಹೋಗುತ್ತಿದ್ದಾಗ ಅರಣ್ಯ ಸಿಬ್ಬಂದಿಗಳನ್ನು ನೋಡಿ ಗಾಬರಿಯಿಂದ ಓಡಲು ಪ್ರಯತ್ನಿಸಿರುತ್ತಾರೆ. ಕೂಡಲೇ ಸಿಬ್ಬಂದಿಗಳು ಅವರನ್ನು ಬೆನ್ನಟ್ಟಿ ಹಿಡಿದು ಅವರ ಬಳಿ ಇದ್ದ ಕೈಚೀಲ ಮತ್ತು ಜಿಪ್ ಇರುವ ಬಟ್ಟೆಯ ಕೈಚೀಲವನ್ನು ಪರಿಶೀಲಿಸಲಾಗಿ, ಅದರಲ್ಲಿ ಶ್ರೀಗಂಧದ 06 ತುಂಡುಗಳನ್ನು ಇಟ್ಟಿರುವುದು ಕಂಡುಬಂದಿರುತ್ತದೆ. ನಂತರ ಅದನ್ನು ತೂಕ ಮಾಡಲಾಗಿ, ಒಟ್ಟು 20 ಕೆ.ಜಿ ಇರುತ್ತದೆ. ಈ ಬಗ್ಗೆ ಆಸಾಮಿಗಳನ್ನು ವಿಚಾರಿಸಲಾಗಿ, ಒಂದನೇ ಆರೋಪಿ ರತ್ನಮ್ಮ ಕೋಂ.ಶಿವಲಿಂಗಮ್, ವಯಸ್ಸು-40ವರ್ಷ, ಎ.ಕೆ.ಮೊಟ್ಟೂರು, ವೆಸುಮಂಗಳಂ ಅಂಚೆ, ತಿರುಪತ್ತೂರು ತಾಲ್ಲೂಕು, ತಮಿಳುನಾಡು ಎಂದು ಹಾಗೂ ಎರಡನೇ ಆರೋಪಿ ಎಸ್.ಮಹಾರಾಜನ್ ಬಿನ್ ಶಿವಲಿಂಗಮ್, ವಯಸ್ಸು-15ವರ್ಷ, ಎ.ಕೆ.ಮೊಟ್ಟೂರು, ವೆಸುಮಂಗಳಂ ಅಂಚೆ, ತಿರುಪತ್ತೂರು ತಾಲ್ಲೂಕು, ತಮಿಳುನಾಡು ಎಂದು ತಿಳಿಸಿರುತ್ತಾರೆ. ಶ್ರೀಗಂಧವನ್ನು ಹೊಂದಿರುವ ಬಗ್ಗೆ ಆರೋಪಿಗಳನ್ನು ವಿಚಾರಿಸಲಾಗಿ, ಸದರಿ ಶ್ರೀಗಂಧದ ತುಂಡುಗಳನ್ನು ಮಾರಾಟ ಮಾಡಲು ತಮಿಳುನಾಡಿನ ತಿರುಪತ್ತುರು ತಾಲ್ಲೂಕು, ಎಸ್.ಕೆ.ಮೊಟ್ಟೂರು ಗ್ರಾಮದಿಂದ ಬೆಂಗಳೂರಿನ ಶೇಷಾದ್ರಿಪುರಂಗೆ ಬಸ್ಸಿನ ಮೂಲಕ ಸಾಗಾಣೆ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ಶ್ರೀಗಂಧವನ್ನು ಸಾಗಿಸಲು ಇಲಾಖೆಯ ರಹದಾರಿಯನ್ನು ಕೇಳಲಾಗಿ, ಆರೋಪಿಗಳ ಬಳಿ ಯಾವುದೇ ರಹದಾರಿ ಇಲ್ಲವೆಂದು ತಿಳಿಸಿರುತ್ತಾರೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಇಬ್ಬರು ಆರೋಪಿಯನ್ನು ಹಾಗೂ ಒಟ್ಟು 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.

2. ಬಂಧಿಸಲಾದ ಆರೋಪಿಗಳನ್ನು ಗೌರವಾನ್ವಿತ 7ನೇ ಎ.ಸಿ.ಎಂ.ಎಂ ನ್ಯಾಯಾಲಯ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

3. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 20 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

4. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ವಿ.ಶ್ರೀನಿವಾಸಪ್ಪ ಬಿನ್ ಲೇಟ್.ವರದಪ್ಪ, ವಲಯ ಅರಣ್ಯಾಧಿಕಾರಿ, ಶ್ರೀ.ವೆಂಕಟರಾಜು ಬಿನ್ ಲೇಟ್.ಗುರಪ್ಪ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ತಿಮ್ಮಯ್ಯ ಬಿನ್ ಸುಗ್ಗಪ್ಪ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ), ಶ್ರೀ.ವೀರಣ್ಣಾರಾಧ್ಯ ಬಿನ್ ಚಂದ್ರಶೇಖರ್ ಆರಾಧ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಕೆ.ಎಸ್.ರುದ್ರಯ್ಯ ಬಿನ್ ಸಿದ್ದಯ್ಯ ಉರುಫ್ ಲಕುವಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ ಸರ್ಕಾರಿ ಅಭಿಯೋಜಕರು ನಡೆಸಿರುತ್ತಾರೆ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಹೆಚ್ಚಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

5. ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಮತ್ತು ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸರ್ಕಾರಿ ವಕೀಲರ ವಾದ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

6(1) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸಾಗಣೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87 ರ ಉಲ್ಲಂಘನೆಯಾಗಿದೆಯೇ?

6(2) ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

6(3) ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?
ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

6(4) ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(5) ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

6(6) ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

7. ದಿನಾಂಕ:09–01–1997ರಂದು ಬೆಂಗಳೂರು ನಗರದ ಮಲ್ಲೇಶ್ವರಂ 1ನೇ ಕ್ರಾಸ್, ಸಂಪಿಗೆ ರಸ್ತೆಯಲ್ಲಿ ಇಬ್ಬರು ಆರೋಪಿಗಳು ಅಕ್ರಮವಾಗಿ 20 ಕೆ.ಜಿ. ಶ್ರೀಗಂಧದ ತುಂಡುಗಳನ್ನು ಸಾಗಣೆ ಮಾಡಲು ಯತ್ನಿಸಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84ರ ಮೇರೆಗೆ ಶ್ರೀಗಂಧವು ರಾಜ್ಯ ಸರ್ಕಾರದ ಸ್ವತ್ತಾಗಿದ್ದು, ಅದರ ಮಾಲೀಕತ್ವವು ಸಾಬೀತಾಗುವವರೆಗೆ ರಾಜ್ಯ ಸರ್ಕಾರದ ಸ್ವತ್ತೆಂದು ಪರಿಗಣಿಸಬೇಕಾಗಿರುತ್ತದೆ. ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆರೋಪಿಗಳು ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಒಟ್ಟು 20 ಕೆ.ಜಿ ಶ್ರೀಗಂಧದ ತುಂಡುಗಳು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಿರುತ್ತೇನೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:250/1996–97ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಟ್ಟು 20 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಿರುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:21–02–2012ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಸಂಖ್ಯೆ:ಎಫ್.ಓ.ಸಿ ಸಂಖ್ಯೆ:281/2009-10 ದಿನಾಂಕ:30/12/2009.

ಸಂಖ್ಯೆ:ಎ1. ಎಫ್.ಓ.ಸಿ. 281/2009-10 ದಿನಾಂಕ:21/02/2012.

ಉಪಸ್ಥಿತರು	:	ಶ್ರೀ.ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಪಿರ್ಯಾದಿ	:	ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು.
ಅರ್ಜಿದಾರರು ಆರೋಪಿಗಳು	:	1-ಫೈರೋಜ್ ಬಿನ್ ಪ್ಯಾರಾಜಾನ್, ಮಟನ್ ಮಾರ್ಕೆಟ್ ಮೊಹಲ್ಲಾ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ. (ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ).

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:30-12-2009ರಂದು ಬೆಳಗಿನ ಜಾವ 4.30ರ ಸಮಯದಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಭಾರತೀಯ ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆಯ ಆವರಣ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು ಇಲ್ಲಿ ಗಸ್ತು ಕಾರ್ಯದಲ್ಲಿ ನಿರತರಾಗಿದ್ದಾಗ ಸದರಿ ಸಂಸ್ಥೆಯ ಆವರಣದಲ್ಲಿ ಕಾವಲು ಕಾರ್ಯದಲ್ಲಿದ್ದ ಸೆಕ್ಯೂರಿಟಿ ಗಾರ್ಡ್‌ಗಳು ಜೋರಾಗಿ ಗಲಾಟೆ ಮಾಡುತ್ತಿದ್ದ ಶಬ್ಧವನ್ನು ಆದರಿಸಿ ಹೋಗಿ ನೋಡಲಾಗಿ, ಯಾರೋ ದುಷ್ಕರ್ಮಿಗಳು ಆವರಣದಲ್ಲಿರುವ ಒಂದು ಶ್ರೀಗಂಧದ ಮರವನ್ನು ಅಕ್ರಮವಾಗಿ ಕಡಿಯುತ್ತಿದ್ದಾರೆ ಎಂದು ಅಲ್ಲಿನ ಸೆಕ್ಯೂರಿಟಿ ಗಾರ್ಡ್‌ಗಳು ತಿಳಿಸಿರುತ್ತಾರೆ. ಅದರಂತೆ ಅರಣ್ಯ ಸಿಬ್ಬಂದಿಗಳು ಕೂಡಲೇ ಮರ ಕುಯ್ಯುವ ಶಬ್ಧವನ್ನು ಆಧರಿಸಿ ಸದರಿ ಸ್ಥಳಕ್ಕೆ ದಾಪಿಸಿದಾಗ ಓಡಿ ಹೋಗುತ್ತಿದ್ದ ಆಸಾಮಿಗಳನ್ನು ಕಂಡು ಅವರನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದಾಗ ಒಬ್ಬ ಆಸಾಮಿ ಸಿಕ್ಕಿಬಿದ್ದಿದ್ದು, ಇನ್ನೊಬ್ಬ ಆಸಾಮಿ ಕತ್ತಲಿನಲ್ಲಿ ಪರಾರಿಯಾಗಿರುತ್ತಾನೆ. ನಂತರ ಸಿಕ್ಕಿಬಿದ್ದ ಆಸಾಮಿಯ ಬಗ್ಗೆ ವಿಚಾರಿಸಲಾಗಿ, ಫೈರೋಜ್ ಬಿನ್ ಪ್ಯಾರಾಜಾನ್, ವಯಸ್ಸು 45 ವರ್ಷ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆಯ ವಾಸಿ ಎಂದು ತಿಳಿಸಿರುತ್ತಾನೆ. ಆಸಾಮಿಯು ಕಡಿದಿದ್ದ ಮರವನ್ನು ಪರಿಶೀಲಿಸಲಾಗಿ, ಅದು ಶ್ರೀಗಂಧದ ಮರವೆಂದು ಖಚಿತಪಡಿಸಿಕೊಳ್ಳಲಾಯಿತು. ಸರ್ಕಾರಿ ಜಾಗದಲ್ಲಿ ಶ್ರೀಗಂಧದ ಮರವನ್ನು ಕಡಿಯಲು ಪರವಾನಿಗೆ ಪಡೆಯಲಾಗಿದೆ ಎಂದು ವಿಚಾರಿಸಲಾಗಿ, ತನ್ನ ಬಳಿ ಯಾವುದೇ ಅರಣ್ಯ ಇಲಾಖೆಯ ಅನುಮತಿ ಅಥವಾ ರಹದಾರಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ನಂತರ ಮರವನ್ನು ಕಡಿಯಲು ಬಳಸಿದ ಉಪಕರಣಗಳ ಬಗ್ಗೆ ಕೇಳಲಾಗಿ, ಓಡಿ ಹೋದ ಆಸಾಮಿಯು ಎಲ್ಲಾ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿರುತ್ತಾನೆಂದು ತಿಳಿಸಿರುತ್ತಾನೆ. ಓಡಿ ಹೋದ ಆಸಾಮಿಯ ಬಗ್ಗೆ ಮಾಹಿತಿ ಕೇಳಲಾಗಿ, ತನಗೆ ಗೊತ್ತಿರುವುದಿಲ್ಲ. ದುಡ್ಡಿನ ಆಸೆಗಾಗಿ ಆತನ ಜೊತೆ ಬಂದು ಈ ಕೃತ್ಯ ಎಸಗಿರುವುದಾಗಿ ತಿಳಿಸಿರುತ್ತಾನೆ. ಅಕ್ರಮವಾಗಿ ಕಡಿತಲೆ ಮಾಡಲಾಗಿದ್ದ ಶ್ರೀಗಂಧದ ಎರಡು ಹಸಿ ತುಂಡುಗಳನ್ನು ತೂಕ ಮಾಡಲಾಗಿ ಒಟ್ಟು 6.15 ಕೆ.ಜಿ ಇರುತ್ತದೆ.

2. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969 ಉಲ್ಲಘಿಸಿರುವ ಕಾರಣ, ಫೈರೋಜ್ ಬಿನ್ ಪ್ಯಾರಾಜಾನ್ ಈತನನ್ನು ಬಂಧಿಸಿ ಒಟ್ಟು 6.15 ಕೆ.ಜಿ ಶ್ರೀಗಂಧದ ಎರಡು ಹಸಿ ತುಂಡುಗಳನ್ನು ಪಂಚನಾಮೆ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆ ದಾಖಲಿಸಿರುತ್ತಾರೆ.

3. ಬಂಧಿಸಲಾದ ಆರೋಪಿಯನ್ನು ಮಾನ್ಯ 7ನೇ ಎ.ಸಿ.ಎಂ.ಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಂತರ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಹೆಚ್ಚಿನ ತನಿಖೆಗಾಗಿ ಒಟ್ಟು 6.15 ಕೆ.ಜಿ ಶ್ರೀಗಂಧದ ಎರಡು ಹಸಿ ತುಂಡುಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

4. ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸರ್ಕಾರಿ ಜಾಗದಲ್ಲಿ ಕಡಿದು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಅಮಾನತ್ತುಪಡಿಸಿಕೊಂಡಿರುವ 6.15 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರನ್ನು ಕೋರಿರುತ್ತಾರೆ.

5. ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎನ್.ಜಿ.ಸತ್ಯನಾರಾಯಣ ಬಿನ್ ಲೇಟ್.ಗಂಗಣ್ಣ, ವಲಯ ಅರಣ್ಯಾಧಿಕಾರಿ, ಶ್ರೀ.ಜಯರಾಮಯ್ಯ ಬಿನ್ ಮರೀಗೌಡ, ವನಪಾಲಕ, ಯು.ಸಿ.ವರದರಾಜಯ್ಯ ಬಿನ್ ಚಿಕ್ಕಹನುಮಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ಬಿ.ಬಿ.ಮೇಟಿ ಬಿನ್ ಬಸಪ್ಪ, ಅರಣ್ಯ ರಕ್ಷಕ ಇವರುಗಳ ಇವರುಗಳ ಮುಖ್ಯ ವಿಚಾರಣೆಯನ್ನು ಸಹಾಯಕ

